ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly. KOPPA - CHM. ಫೋನ್: 114

5ನೇ ವರ್ಷ 41ನೇ ಸಂಚಿಕೆ ಕೊಪ್ಪ 5-7-1987 ಭಾನುವಾರ ಬೆಲೆ 50 ಪೈಸೆ

ದಲಿತರಿಗೆ ಸಾಮಾಜಿಕ ಬಹಿಷ್ಕಾರ ಪ್ರತಿಭಟಿಸಿ ದ. ಸಂ. ಸ. ಧರಣಿ

ಕೊಪ್ಪ: ರಾಯಚೂರಿನ ಪಿ.ವಕಿನ್ಹಾಳ ಮತ್ತು ಗಿಣಿಗೇರಾ ಗ್ರಾಮಗಳಲ್ಲಿ ಅಲ್ಲಿನ ಮೇಲ್ಜಾತಿ ಭೂಮಾಲೀಕರು, ಪೂಜಾರಿಗಳು ಹಾಗೂ ಧಾರ್ಮಿಕ ಮುಖಂಡರು ದಲಿತರಿಗೆ ಸಾಮಾಜಿಕ ಬಹಿಷ್ಕಾರ ವಿಧಿಸಿರುವುದನ್ನು ಪ್ರತಿಭಟಿಸಿ ಹಾಗೂ ಈ ಸಂಬಂಧ ಅಪರಾಧಿಗಳ ಮೇಲೆ ತೀವ್ರ ಕ್ರಮ ಕೈಗೊಂಡು ದಲಿತರಿಗೆ ರಕ್ಷಣೆ ಕೊಡಬೇಕೆಂದು ಒತ್ತಾಯಿಸಿ ಜುಲೈ 2ರಂದು ರಾಜ್ಯಾದ್ಯಂತ ದಲಿತ ಸಂಘರ್ಷ ಸಮಿತಿಯ ಶಾಖೆಗಳು ಧರಣಿ ನಡೆಸಿ ಸರ್ಕಾರಕ್ಕೆ ಮನವಿ ಪತ್ರಗಳನ್ನು ಸಲ್ಲಿಸಿದರು.

ಲಿಂಗಸೂಗೂರು ತಾಲ್ಲೂಕಿನ ಪಿ.ವಕಿನ್ಹಾಳ ಗ್ರಾಮದಲ್ಲಿ ಕೆರೆಯಂಗಳ ಮತ್ತು ಇತರ ಸರ್ಕಾರಿ ಭೂಮಿಯಲ್ಲಿ 170 ಎಕರೆ ಭೂಮಿಯನ್ನು ದ. ಸಂ. ಸ ನೇತೃತ್ವದಲ್ಲಿ 3 ವರ್ಷಗಳ ಸತತ ಹೋರಾಟದ ನಂತರ ದಲಿತರು ಮಂಜೂರು ಮಾಡಿಸಿಕೊಂಡರು. ಆದರೆ ಅಲ್ಲಿನ ಭೂಮಾಲೀಕ ಮಹೇಂದ್ರ ಬಾಬು, ಅವನ ತಮ್ಮ ಲಿಂಗರಾಜ, ಅಲ್ಲಿನ ಮಂಡಲ ಪ್ರಧಾನ, ಮಠಾಧಿಪತಿ ರುದ್ರಮುನಿ ಸ್ವಾಮಿ ಮುಂತಾದವರೆಲ್ಲ ಸೇರಿಕೊಂಡು ದಲಿತರಿಗೆ ಆ ಭೂಮಿಯನ್ನು ಉಳುಮೆ ಮಾಡಲು ಬಿಡದೆ ಅಡ್ಡಿಪಡಿಸಿದ್ದಲ್ಲದೆ, ದಲಿತರ ಮನೆಗಳ ಮೇಲೆ ದಾಳಿ ಮಾಡಿ ಬೆಂಕಿಯಿಟ್ಟು ಲೂಟಿ, ಧ್ವಂಸಕಾಂಡ ನಡೆಸಿದರು. ಹಾಗೂ ಊರಿನಲ್ಲಿ ಅವರಿಗೆಲ್ಲ ಅಂಗಡಿಗಳಲ್ಲಿ ಸಾಮಾನುಗಳನ್ನು, ಹೋಟೆಲಲ್ಲಿ ಚಾ, ಕಾಫಿಯನ್ನು, ಔಷಧಿಗಳನ್ನು, ಕೂಲಿಯನ್ನು ಕೊಡಬಾರದೆಂದು ಸಾಮಾಜಿಕ ಬಹಿಷ್ಕಾರ ಹಾಕಿಸಿದರು.

ಅಂತೆಯೇ, ಕೊಪ್ಪಳ ತಾಲ್ಲೂಕಿನ ಗಿಣಿಗೇರಾ ಗ್ರಾಮದಲ್ಲಿ ಅಸ್ಪೃಶ್ಯತೆಯ ಕಾರಣದಿಂದ ದಲಿತರಿಗೆ ಇದೇ ರೀತಿ ಸಾಮಾಜಿಕ ಬಹಿಷ್ಕಾರ ಹಾಕಿ ಅವರನ್ನು ಸಾಮೂಹಿಕವಾಗಿ ಸಾವಿನ ದವಡೆಗೆ ನೂಕಿದ್ದಾರೆ.

ಇದು ದಲಿತ ಸಂಘರ್ಷ ಸಮಿತಿಯ ಪ್ರತಿಭಟನೆಗೆ ಕಾರಣ.

ಕೊಪ್ಪ ತಾ|| ದ. ಸಂ. ಸ. ಕಾರ್ಯಕರ್ತರು ಕೂಡ ಈ ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಪುರಭವನದಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಸಿರಿಮನೆ ನಾಗರಾಜ್ ಮುಖ್ಯ ಅತಿಥಿಯಾಗಿ ಈ ಬಹಿಷ್ಕಾರ ಮತ್ತು ಹಲ್ಲೆಗಳ ಹಿನ್ನೆಲೆಯನ್ನು ವಿವರಿಸಿದರು. ತಾ|| ಸಂಚಾಲಕ ಬಿ. ಎಸ್. ತಮ್ಮಣ್ಣ ಪ್ರತಿಭಟನೆಯ ಉದ್ದೇಶ ವಿವರಿಸಿ, ಎಲ್ಲರ ಸಹಕಾರ ಕೋರಿದರು. (6ನೇ ಪುಟಕ್ಕೆ)

ಸ್ವ- ಉದ್ಯೋಗ ಯೋಜನೆ ಅರ್ಜಿಗೆ ಅವಧಿ ವಿಸ್ತರಣೆ

ಕೊಪ್ಪ: ಸ್ವಯಂ ಉದ್ಯೋಗ ಯೋಜನೆಯನ್ವಯ ಆರ್ಥಿಕ ನೆರವಿಗಾಗಿ ಅರ್ಜಿ ಸಲ್ಲಿಸುವ ಕಡೇ ದಿನಾಂಕವನ್ನು 15-7-87 ಕ್ಕೆ ವಿಸ್ತರಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ 31.5.87 ರ 'ಮುಂಜಾವು' ನೋಡಬಹುದು ಅಥವ ಕೈಗಾರಿಕಾ ವಿಸ್ತರಣಾಧಿಕಾರಿ ಜಿ. ಮಲ್ಲಪ್ಪ ಅವರನ್ನು ಸಂಪರ್ಕಿಸಬಹುದು.

ಗಿರಿಜನಾಭಿವೃದ್ಧಿ ಯೋಜನೆ ಮತ್ತು ವಿಶೇಷ ಘಟಕಯೋಜನೆಗಳಡಿ ವಿವಿಧ ಕಸುಬುಗಳ ತರಬೇತಿಗಾಗಿ ಅರ್ಜಿ ಸಲ್ಲಿಸಿರುವವರು ತಾ|| 14.7.87ರಂದು ಬೆಳಿಗ್ಗೆ ಕೈಗಾರಿಕಾ ವಿಸ್ತರಣಾಧಿಕಾರಿಗಳ ಕಚೇರಿಯಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು. (ಶೃಂಗೇರಿ 13-7-87, ನ. ರಾ. ಪುರ: 15.7.87) ಈ ಬಗ್ಗೆ ಪ್ರತ್ಯೇಕ ಸೂಚನಾ ಪತ್ರ ಕಳಿಸಲಾಗುವುದಿಲ್ಲ ಎಂದು ತಿಳಿಯಪಡಿಸಲಾಗಿದೆ

ಕೊಪ್ಪ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಪಿಯುಸಿಗೆ

ಅಕೌಂಟೆನ್ಸಿ, ಆಡಿಟಿಂಗ್ ಸೇರ್ಪಡೆ.

ಕೊಪ್ಪ: ಇಲ್ಲಿನ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಈ ವರ್ಷದಿಂದ ಪಿಯುಸಿಗೆ ಅಕೌಂಟೆನ್ಸಿ ಮತ್ತು ಆಡಿಟಿಂಗ್ ಉಳ್ಳ ವಿಷಯ ಸಂಯೋಜನೆಯನ್ನು ಹೊಸದಾಗಿ ಸೇರ್ಪಡೆ ಮಾಡಲಾಗಿದ್ದು, ಆಸಕ್ತಿಯುಳ್ಳ ಅಭ್ಯರ್ಥಿಗಳು ಕೂಡಲೇ ತರಗತಿಗಳಿಗೆ ಸೇರಿಕೊಳ್ಳಬಹುದೆಂದು ಪ್ರಿನ್ಸಿಪಾಲರು ತಿಳಿಸಿದ್ದಾರೆ.

ಈ ತರಗತಿಗೆ 30 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುವುದಿಲ್ಲ. ಹಾಗೆಯೇ 20 ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದಲ್ಲಿ ತರಗತಿ ಪ್ರಾರಂಭಿಸಲು ಸಾಧ್ಯವಾಗುವುದಿಲ್ಲ ಎಂದೂ ಅವರು ತಿಳಿಸಿದ್ದಾರೆ.

ಈ ತರಗತಿಗಳಿಗೆ ದಾಖಲಾತಿಯ ಕೊನೇ ದಿನಾಂಕಗಳು ಹೀಗಿವೆ: ದಂಡ ವಿಲ್ಲದೆ- 5 7.87; ದಿನಕ್ಕೆ 1ರೂ. ಯಂತೆ ದಂಡದೊಂದಿಗೆ (ಗರಿಷ್ಠ 5ರೂ.)-22-7-87; 5ರೂ ದಂಡ ಮತ್ತು ತಡವಾದ ದಾಖಲಾತಿ ಶುಲ್ಕ 25 ರೂ ಗಳೊಂದಿಗೆ ಅಂತಿಮ ದಿನಾಂಕ 31-7-87.

ಹೆಚ್ಚಿನ ವಿವರಗಳನ್ನು ಕಾಲೇಜಿನ ಕಛೇರಿಯಲ್ಲಿ ಪಡೆಯಬಹುದೆಂದು ತಿಳಿಸಲಾಗಿದೆ.

ಹೀಗೊಂದು ಸರಳ ವಿವಾಹ

ಕೊಪ್ಪ: ಇಲ್ಲಿನ ಆರೋಗ್ಯ ಇಲಾಖೆ ನೌಕರ ಪರಶುರಾಮಪ್ಪ ಅವರಿಗೆ ಕಮಲಾಬಾಯಿ ಎಂಬ ವಧುವಿನೊಂದಿಗೆ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಸೇರಿ ಜುಲೈ 1ರಂದು ಸರಳವಾಗಿ, ಆದರೆ ಸಡಗರದೊಂದಿಗೆ ಮದುವೆ ನೆರವೇರಿಸಿದರು.

ಪುರಭವನದೊಳಗೆ ಈ ಮದುವೆ ನಡೆಯಿತು. ಅಂದು ಇಲಾಖೆಯ ಸಮ್ಮೇಳನವಿದ್ದುದರಿಂದ ಈ ಕೇಂದ್ರದ ವ್ಯಾಪ್ತಿಯ ಎಲ್ಲೆಡೆಯಿಂದ ಹಾಗೂ ಸುತ್ತ ಮುತ್ತಲ ಆರೋಗ್ಯ ಘಟಕಗಳಿಂದ ಬಂದ ಪ್ರತಿನಿಧಿಗಳು ಸಮ್ಮೇಳನ ಮುಗಿಸಿ ಉತ್ಸಾಹದಿಂದ ಮದುವೆಯಲ್ಲಿ ಪಾಲ್ಗೊಂಡರು. ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ತಹಸೀಲ್ದಾರ್ ಶ್ರೀನಿವಾಸ್ ಅತಿಥಿಗಳಾಗಿದ್ದರು.

ಹಾರ ವಿನಿಮಯದ ಜೊತೆಗೆ ಚಿಟ್ಟೆಮಕ್ಕಿ ರವಿ ಪಟವರ್ಧನ್ ಮಾಂಗಲ್ಯ ಧಾರಣೆ ಮಾಡಿಸಿದರು. ಮಹಿಳಾ ಸಹೋದ್ಯೋಗಿಗಳು ನೂತನ ದಂಪತಿಗಳಿಗೆ ಆರತಿ ಬೆಳಗಿದರು.

ವಧೂವರರಿಬ್ಬರೂ ಬ್ಯಾಡಗಿ ಕಡೆಯ ಲಂಬಾಣಿ ಜನಾಂಗದವರು. ತಂದೆ ತಾಯಿಗಳಿಲ್ಲದ ಪರಶುರಾಮಪ್ಪ ಕುಷ್ಠರೋಗದಿಂದ ಗುಣಮುಖರಾದ ವ್ಯಕ್ತಿ ಎನ್ನಲಾಗಿದೆ.

ಜುಲೈ 14ರಿಂದ 1 ವಾರ ಕಾಲ ಅಂಚೆ ನೌಕರರ ಮುಷ್ಕರ

ಕೊಪ್ಪ: ಅಖಿಲ ಭಾರತ ಅಂಚೆ ಇಲಾಖಾ ಮತ್ತು ಇಲಾಖೇತರ ನೌಕರರ ಬಹುಕಾಲದ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಯಾವುದೇ ಪ್ರಯತ್ನಗಳಿಗೆ ಸರ್ಕಾರವು ಬೆಲೆ ಕೊಡದಿರುವುದರಿಂದ ಜುಲೈ 14ರಿಂದ 20ರವರೆಗೆ ದೇಶಾದ್ಯಂತ ಕೆಲಸ ಸ್ಥಗಿತಗೊಳಿಸಿ ಪೂರ್ಣ ರೂಪದ ಮುಷ್ಕರ ನಡೆಸಲು ನೌಕರರ ಸಂಘಗಳ ಒಕ್ಕೂಟ ನಿರ್ಧರಿಸಿದೆ. ಇದರನ್ವಯ ಚಿಕ್ಕಮಗಳೂರು ಅಂಚೆ ವಿಭಾಗ ಮತ್ತು ಜಿಲ್ಲಾದ್ಯಂತ ಮುಷ್ಕರ ನಡೆಯುವುದೆಂದು ಜಂಟಿ ಹೋರಾಟ ಸಮಿತಿಯ ಅಧ್ಯಕ್ಷ ಮತ್ತು ಎ.ಐ.ಪಿ.ಇ.ಯು. ವಿ|| ಕಾರ್ಯದರ್ಶಿ ಬಿ. ಎಸ್. ನಾಗರಾಜ್ ತಿಳಿಸಿದ್ದಾರೆ

ಶಂಕರ್ ಕಾರ್ಮಿಕರ ಮುಷ್ಕರ ಸನ್ನಿಹಿತ?

ಕೊಪ್ಪ: ಕಳೆದ 24 ದಿನಗಳಿಂದ ನಡೆಯುತ್ತಿರುವ ಇಲ್ಲಿನ ಶಂಕರ್ ಕಂಪೆನಿ ಕಾರ್ಮಿಕರ ಉಪವಾಸ ಸತ್ಯಾಗ್ರಹ ಪೂರ್ಣ ಪ್ರಮಾಣದ ಮುಷ್ಕರದತ್ತ ತಿರುಗುವ ಖಚಿತವಾದ ಲಕ್ಷಣಗಳು ಕಂಡು ಬರುತ್ತಿವೆ

ಚಿಕ್ಕಮಗಳೂರಿನ ಸಹಾಯಕ ಕಾರ್ಮಿಕ ಕಮಿಶನರ್ ಅವರು ಕಾರ್ಮಿಕ ಸಂಘಕ್ಕೂ ಮಾಲೀಕರಿಗೂ ಮಧ್ಯೆ ಜೂನ್ 18 ಮತ್ತು 30ರಂದು 2 ಬಾರಿ ಸಂಧಾನ ಸಭೆಗಳನ್ನು ಏರ್ಪಡಿಸಿದ್ದರೂ ಮಾಲೀಕರು ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವ ದಿಕ್ಕಿನಲ್ಲಿ ಯಾವ ಸೂಚನೆಗೂ ಸಮ್ಮತಿಸಿಲ್ಲ ಎನ್ನಲಾಗಿದೆ.

ಮತ್ತೆ ಸಭೆ

ಪುನಃ ಜುಲೈ 9ರಂದು ಇನ್ನೊಂದು ಸುತ್ತಿನ ಸಂಧಾನ ಸಭೆ ಏರ್ಪಟ್ಟಿದೆಯಾದರೂ, ಮಾಲೀಕರ ಈವರೆಗಿನ ಹಠಮಾರಿತನದ ಮತ್ತು ಕಾರ್ಮಿಕ ವಿರೋಧಿಯಾದ ನೀತಿಯನ್ನು ಗಮನಿಸಿದರೆ ಯಾವುದೇ ಆಶಾದಾಯಕವಾದ ಪ್ರತಿಫಲವನ್ನು ಈ ಸಭೆಯಿಂದ ನಿರೀಕ್ಷಿಸುವಂತಿಲ್ಲ ಎಂದು ಕಾರ್ಮಿಕರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿ, ಮಾಲೀಕರ ಈ ನಿಲುವನ್ನು ಖಂಡಿಸಿದ್ದಾರೆ.

ಸಾರ್ವಜನಿಕರ, ಕಾರ್ಮಿಕರ ಹಾಗೂ ಒಟ್ಟಾರೆ ಸಂಸ್ಥೆಯ ಹಿತ ದೃಷ್ಟಿಯಿಂದ ಮಾಲೀಕರು ಇನ್ನಾದರೂ ನ್ಯಾಯಬದ್ಧವಾದ ನಿಲುವು ತಳೆದು, ಬೇಡಿಕೆಗಳ ಈಡೇರಿಕೆಗೆ ಮುಂದಾಗದಿದ್ದರೆ ಚಳುವಳಿಯನ್ನು ತೀವ್ರಗೊಳಿಸುವುದು ಅನಿವಾರ್ಯವೆಂದು ಕಾರ್ಮಿಕರು ಮಾಲೀಕರಿಗೆ ಎಚ್ಚರಿಕೆ ನೀಡಿದ್ದಾರೆ.


ಬೆಂಬಲ

ಈ ಮಧ್ಯೆ, ಕಾರ್ಮಿಕರ ಈ ಹೋರಾಟಕ್ಕೆ ಚಿಕ್ಕಮಗಳೂರು ಜಿಲ್ಲಾ ಲಾರಿ ಮತ್ತು ಬಸ್ ಚಾಲಕರ ಸಂಘ (ಸ್ವತಂತ್ರ) ಹಾಗೂ ಯುನೈಟೆಡ್ ಪ್ಲಾಂಟೇಶನ್ ವರ್ಕರ್ಸ್ ಯೂನಿಯನ್ (ಎಐಟಿಯುಸಿ) ಗಳು ಪೂರ್ಣ ಬೆಂಬಲ ವ್ಯಕ್ತಪಡಿಸಿವೆ. ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕಾರ್ಮಿಕರು ಪ್ರಧಾನ ಕಾರ್ಯದರ್ಶಿ ರೇಣುಕಾರಾಧ್ಯ ಅವರ ನೇತೃತ್ವದಲ್ಲಿ ಜೂನ್ 28ರಂದು ಕೊಪ್ಪದಲ್ಲಿ ಮೆರವಣಿಗೆ, ಬಹಿರಂಗ ಸಭೆ ನಡೆಸಿದರು.

ಹಲ್ಲೆ ಆರೋಪ : ಮೂವರ ಮೇಲೆ ಮೊಕದ್ದಮೆ

ಕೊಪ್ಪ: ಕೆಸವೆ ಸಮೀಪದ ಚೌಕಿ ಎಂಬಲ್ಲಿ ಜೂನ್ 27 ರ ರಾತ್ರಿ ಲಕ್ಷ್ಮಣ ಪೂಜಾರಿ ಎಂಬವರ ಮೇಲೆ ಅಲ್ಲಿಯ ಕರಿಯ ಶೆಟ್ಟಿ, ನಿರೀಶ ಬಾಬು ಮತ್ತು ಗುಣವಂತೆ ರಸ್ತೆಯ ಉಮರ್ ಎಂಬವರು ಹಲ್ಲೆ ನಡೆಸಿದ್ದಾರೆಂಬ ದೂರಿನ ಮೇಲೆ ಮೊಕದ್ದಮೆ ದಾಖಲಾಗಿದೆ ಉಮರ್‌ನನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಉಳಿದಿಬ್ಬರು ನ್ಯಾಯಾಲಯದಲ್ಲಿ ಶರಣಾಗಿದ್ದಾರೆನ್ನಲಾಗಿದೆ.

ಗಾಯಾಳುವನ್ನು ಜು. 2 ರವರೆಗೆ ಕೊಪ್ಪ ಆಸ್ಪತ್ರೆಯಲ್ಲಿ ದಾಖಲುಮಾಡಿ ಚಿಕಿತ್ಸೆ ನೀಡಲಾಯಿತೆಂದು ತಿಳಿದುಬಂದಿದೆ.



ಚಿಟ್ಟೆ

ಬಣ್ಣದ ಚಿಟ್ಟೆ ಸುಂದರ ಚಿಟ್ಟೆ
ರೆಕ್ಕೆ ಬಿಚ್ಚಿ ಹಾರಿ ಹೋಗುವೆ
ಹೂವಿಂದ ಹೂವಿಗೆ
ಎರಗುತ ಹೋಗುವೆ
ಮಕರಂದವನು
ಹೀರುತ ಹೋಗುವೆ
ಹಿಡಿಯಲು ಹೋದರೆ
ದೂರ ಹಾರುವೆ.
ಬಣ್ಣದ ಚಿಟ್ಟೆ ಸುಂದರ ಚಿಟ್ಟೆ
ರೆಕ್ಕೆ ಬಿಚ್ಚಿ ಹಾರಿ ಹೋಗುವೆ.

—ಬಿ. ವಿ. ರಶ್ಮಿ,
ಹರಿಹರಪುರ.

ಜಾಣ ಪ್ರಶ್ನೆಗಳಿಗೆ ಸರಿಯುತ್ತರಗಳು

1) ಯಾವುದನ್ನು ಅಪಹರಿಸಿದರೂ ಒಂದನ್ನು ಅಪಹರಿಸಲಾಗದು. ಏನದು?
ಉತ್ತರ: ವಿದ್ಯೆ.

2) ಕಣ್ಣಿದ್ದೂ ಕುರುಡರು ಯಾರು?
ಉತ್ತರ: ತಿಳಿದೂ ತಿಳಿಯದಂತೆ ವರ್ತಿಸುವವರು.

3) ಒಡೆದ ನಂತರವೇ ಹೆಚ್ಚು ಉಪಯೋಗಕ್ಕೆ ಬರುವ ವಸ್ತು : ಮೊಟ್ಟೆ. (ತೆಂಗಿನಕಾಯಿ, ಮುತ್ತಿನ ಚಿಪ್ಪು ಕೂಡ ಆಗಬಹುದು.)

4) ಒಬ್ಬರಿಗೆ ಅತಿ, ಇಬ್ಬರಿಗೆ ಹದ, ಮೂವರಿಗೆ ಹಂಚಿದರೆ ಯಾವ ಬೆಲೆಯೂ ಇಲ್ಲ. ಉತ್ತರ: ಗುಟ್ಟು.

5) Aಯು Bಯ ತಂದೆ. ಆದರೆ Bಯು Aಯ ಮಗನಲ್ಲ. B ಯಾರು?
ಉತ್ತರ: ಮಗಳು.

(ಪೂರ್ತಿ ಸರಿಯುತ್ತರ ಯಾರೂ ಕಳಿಸಿಲ್ಲ. ಶಾನುವಳ್ಳಿಯ ಪವಿತ್ರಾ 4 ಸರಿಯುತ್ತರ ಕಳಿಸಿದ್ದಾಳೆ. ನಾಲ್ವರು 3 ಸರಿಯುತ್ತರ ಕಳಿಸಿದ್ದಾರೆ. —ಸಂ.)

ಇನ್ನಷ್ಟು ಜಾಣ ಪ್ರಶ್ನೆಗಳು

1. ಹೋಗುವಾಗ 5, ಬರುವಾಗ 15 ಏನದು?
2. ಅತ್ಯಂತ ಪ್ರಾಚೀನ ನಾಗರಿಕತೆ ಯಾವುದು?
3. ದ್ರಾಕ್ಷಿ ಹಣ್ಣಿನ ಮಾದಕ ಪಾನೀಯವನ್ನು ಮೊದಲು ತಯಾರಿಸಿದ ದೇಶ ಯಾವುದು?
4. "ತೂಗಾಡುವ ತೊಟ್ಟಿಲ"ನ್ನು ಮೊದಲು ಸ್ಥಾಪಿಸಿದವನು ಯಾರು?
5. ಅತ್ಯಂತ ದೊಡ್ಡದಾದ ಪಿರಮಿಡ್ಡು ಎಲ್ಲಿದೆ? ಇದು ಯಾವ ಅರಸನದು?

ಸಂಗ್ರಹ: ಎಸ್. ಟಿ. ಪವಿತ್ರ,
ಶಾನುವಳ್ಳಿ.

ಸ್ವರ್ಗದ ಮಗನಿಗೆ ಮೀನಿನ ಅಡುಗೆ !

ಒಂದು ಊರಿನಲ್ಲಿ ಒಬ್ಬ ರೈತನೂ ಅವನ ಹೆಂಡತಿಯೂ ಕಷ್ಟ ಪಟ್ಟು ದುಡಿದು ಬದುಕುತ್ತಿದ್ದರು. ರೈತ ತಾನು ಬೆಳೆದ ಪದಾರ್ಥಗಳನ್ನು ಸಂತೆಗೆ ಒಯ್ದು ಮಾರಿ ಹಣ ಸಂಪಾದಿಸುತ್ತಿದ್ದ. ಅದರಿಂದ ಅವರು ಸಾಲ ಸೋಲಗಳಿಲ್ಲದೆ ಕಷ್ಟದಲ್ಲೂ ತೃಪ್ತಿಯಿಂದಿದ್ದರು.

ರೈತ ಅಕ್ಕಿ ಮಾರಿದಾಗ ಕ್ವಿಂಟಾಲಿಗೆ ಇನ್ನೂರೈವತ್ತು ರೂಪಾಯಿ ಬರುತ್ತಿತ್ತು. ಒಂದು ದಿನ ಸಂತೆಗೆ ಹೋಗಿದ್ದ ಆಗ ಹೆಂಡತಿ ಅಲ್ಲಿ ಅಕ್ಕಿಯ ಬೆಲೆಯನ್ನು ವಿಚಾರಿಸಿದಾಗ ಮೂನೂರವರೆ ರೂಪಾಯಿ ಹೇಳಿದರು. ಕ್ವಿಂಟಾಲಿಗೆ ಎಷ್ಟೆಂದು ವಿಚಾರಿಸಿದಾಗ ಮುನ್ನೂರೈವತ್ತು ಹೇಳಿದರು.

ರೈತನ ಹೆಂಡತಿ ಯೋಚಿಸಿದಳು—"ಕ್ವಿಂಟಾಲಿಗೆ ಮುನ್ನೂರೈವತ್ತು ರೂಪಾಯಿ ಧಾರಣೆ ಇರುವಾಗ ನನ್ನ ಗಂಡ ಕೇವಲ ಇನ್ನೂರೈವತ್ತಕ್ಕೇ ಮಾರಿ ಬರುತ್ತಿದ್ದಾನಲ್ಲ, ಇವನೆಂಥ ದಡ್ಡ?"

ಹೀಗೆಂದು ಯೋಚಿಸಿದ ಅವಳು ಮನೆಗೆ ಬಂದೊಡನೆ ಗಂಡನೊಡನೆ ವಾದ ಮಾಡಿ ಮುಂದಿನ ವಾರದ ಸಂತೆಗೆ ತಾನೇ ಹೋಗುವುದಾಗಿ ಪಟ್ಟು ಹಿಡಿದಳು. ಈ ರೀತಿಯ ಧಾರಣೆ ವ್ಯತ್ಯಾಸವನ್ನು ಅವನು ವಿವರಿಸಿದ್ದು ಅವಳ ಮನಸ್ಸಿಗೆ ಹೋಗಲಿಲ್ಲ. ಅವಳೇ ಬುದ್ಧಿ ಕಲಿಯಲಿ ಎಂದು ಅವನೂ ಸುಮ್ಮನಾದ.

ಸರಿ, ಸಂತೆಗೆ ಕ್ವಿಂಟಾಲು ಅಕ್ಕಿ ತೆಗೆದುಕೊಂಡು ಹೋದ ಹೆಂಡತಿ ಎಲ್ಲಾ ವ್ಯಾಪಾರಿಗಳ ಬಳಿಯೂ ಧಾರಣೆ ಬಗ್ಗೆ ಚರ್ಚೆ ಮಾಡುತ್ತಾ ನಡೆದಳು. ಯಾರೂ ಮುನ್ನೂರೈವತ್ತು ರೂಪಾಯಿ ಕೊಡಲು ಒಪ್ಪಲಿಲ್ಲ. ಅಷ್ಟರೊಳಗೆ ಇವಳ್ಯಾರೋ ದಡ್ಡಿ ಬಂದಿದ್ದಾಳೆಂಬುದನ್ನು ಒಬ್ಬ ಮೋಸಗಾರ ಅರ್ಥ ಮಾಡಿಕೊಂಡ.

ಅವನು ಅವಳನ್ನು ಹತ್ತಿರ ಕರೆದು ಹೇಳಿದ—"ನೋಡು, ನಿನಗೆ ಮುನ್ನೂರೈವತ್ತಲ್ಲ, ಇನ್ನೂ ಹತ್ತು ರೂಪಾಯಿ ಹೆಚ್ಚಿಗೆ ನಾನು ಕೊಡುತ್ತೇನೆ. ಇವರೆಲ್ಲ ಮೋಸಗಾರರು. ಅವರನ್ನು ನೀನು ನಂಬದಿದ್ದುದು ಒಳ್ಳೆಯದಾಯಿತು. ಆದರೆ ಒಂದು ಸಮಸ್ಯೆ. ನಾನು ತಂದ ಹಣವನ್ನೆಲ್ಲ ಖರ್ಚು ಮಾಡಿಬಿಟ್ಟಿದ್ದೇನೆ. ಅಲ್ಲದೆ ನಾನು ನ್ಯಾಯವಂತನಾದರೂ ಒಂದೇ ಸಲಕ್ಕೆ ಅಷ್ಟು ಹಣ ಕೊಡಲು ನನ್ನಲ್ಲಿಲ್ಲ. ಆದ್ದರಿಂದ ಅರ್ಧ ಹಣವನ್ನು ಇನ್ನೊಂದು ತಿಂಗಳಲ್ಲಿ ಕೊಡುತ್ತೇನೆ. ಉಳಿದರ್ಧವನ್ನು ಕಂತಿನಲ್ಲಿ ತೀರಿಸುತ್ತೇನೆ. ಅಕ್ಕಿ ಕೊಟ್ಟು ಹೋಗು"

ತಾನು ಕೇಳಿದ್ದಕ್ಕಿಂಲೂ ಹತ್ತು ರೂಪಾಯಿ ಹೆಚ್ಚಿಗೆ ಬರುವುದೆಂದು ರೈತನ ಹೆಂಡತಿಗೆ ಖುಷಿಯಾಯಿತು. ಅಕ್ಕಿಯನ್ನು ಅವನಿಗೆ ಕೊಟ್ಟಳು. ಗುರುತು ಬೇಕಲ್ಲ? "ನಿನ್ನ ಆ ಹೊಸ ಸ್ವೆಟರ್ ನನಗೆ ಕೊಡು. ನನ್ನ ಈ ಕೋಟು ನೀನಿಟ್ಟುಕೋ" ಎಂದು ಮೋಸಗಾರ ತನ್ನ ಹಳೆಯ ಹರಕು ಕೋಟನ್ನು ಅವಳಿಗೆ ಕೊಟ್ಟು ಅವಳ ಒಳ್ಳೆಯ ಸ್ವೆಟರನ್ನೂ ಲಪಟಾಯಿಸಿದ.

ಖುಷಿಯಿಂದ ಕುಣಿಕುಣಿಯುತ್ತ ಮನೆಗೆ ಬಂದ ರೈತನ ಹೆಂಡತಿ ತನ್ನ ವ್ಯಾಪಾರದ ಜಾಣ್ಮೆಯನ್ನು ಗಂಡನಿಗೆ ಹೇಳಿ ಅವನನ್ನು ಹಂಗಿಸಿದಳು. ಅವನು ದುಡ್ಡು ಕೇಳಿದಾಗ ಅದರ ವಿಲೇವಾರಿಯನ್ನೂ ತನ್ನ ಸ್ವೆಟರಿನ ವಿಲೇವಾರಿಯನ್ನೂ ಹೇಳಿ, ಅವನಿಗೆ ಹರುಕು ಕೋಟನ್ನು ಕೊಟ್ಟಳು.

ಗಂಡನಿಗೆ ಎಲ್ಲಾ ಅರ್ಥವಾಯಿತು. ಕೋಪವೂ ಬಂತು. "ನಾನೀಗ ಪೇಟೆಗೆ ಹೋಗುತ್ತೇನೆ. ನಿನಗಿಂತಲೂ ದಡ್ಡ ಹೆಂಗಸು ಯಾರಾದರೂ ಇರುವುದು ಕಂಡರೆ ಮಾತ್ರ ವಾಪಸು ಬರುತ್ತೇನೆ" ಎಂದು ಹೆಂಡತಿಗೆ ಹೇಳಿ ಕುದುರೆಯೇರಿ ಹೊರಟ.

ಕಣ್ಣಲ್ಲಿ ಕಣ್ಣಿಟ್ಟು ಹುಡುಕುತ್ತಾ ಹೋಗುವಾಗ ಅವನ ಹೆಂಡತಿಯ ಸ್ವೆಟರನ್ನು ಹಾಕಿಕೊಂಡಿರುವ ಹೆಂಗಸೊಬ್ಬಳು ಕಾಣಿಸಿದಳು. ಸೀದಾ ಅವಳ ಬಳಿ ಹೋಗಿ ಕುದುರೆಯಿಂದ ಇಳಿದವನೇ ಅವಳಿಗೆ ನಮಸ್ಕಾರಮಾಡಿ "ನಾನು ಸ್ವರ್ಗದಿಂದ ಬಂದಿದ್ದೇನಮ್ಮಾ" ಎಂದ.

ಕೂಡಲೇ ಅವಳು ಕಣ್ಣಲ್ಲಿ ನೀರು ತುಂಬಿಕೊಂಡು, "ಹೌದೇನಪ್ಪ? ನನ್ನ ಮಗನೂ ಸ್ವರ್ಗದಲ್ಲಿದ್ದಾನಪ್ಪ. ನಿನಗೆ ಅವನ ಪರಿಚಯವಿದೆಯೇ?" ಎಂದು ಮುಗ್ಧವಾಗಿ ಕೇಳಿದಳು.

"ಹೌದಮ್ಮಾ. ಅವನೇ ನನ್ನ ಹತ್ತಿರ ನಿಮ್ಮ ಗುರುತು ಹೇಳಿ ಕಳಿಸಿದ. ಅವನು ಆರೋಗ್ಯವಾಗಿದ್ದಾನೆ. ಆದರೆ ಅವನಿಗೆ ನಿಮ್ಮಗಳ ಯೋಚನೆ ಬಹಳವಾಗಿ ಆಗುತ್ತಿದೆಯಂತೆ. ನಿಮ್ಮ ಕೈಯಿನ ಮೀನಿನಡಿಗೆಯಂತೂ ಅವನಿಗೆ ಯಾವಾಗಲೂ ಆಸೆಯಾಗುತ್ತಿರುತ್ತದಂತೆ. ಜೊತೆಗೆ ಸ್ವಲ್ಪ ದುಡ್ಡನ್ನೂ ತರಲು ಹೇಳಿದ್ದಾನಮ್ಮಾ. ನಾನು ಇವತ್ತೇ ಹೊರಡುವವನಿದ್ದೇನೆ. ಅವನಿಗೆ ಏನಾದರೂ ಕೊಡುವುದಿದ್ದರೆ ತೆಗೆದುಕೊಂಡು ಹೋಗಿ ಕೊಡುತ್ತೇನೆ" ಎಂದ ಆದಷ್ಟೂ ಮೃದುವಾಗಿ.

ಆ ಮಹಿಳೆ ಕೈಕೈ ಹಿಸುಕಿಕೊಂಡಳು. "ಏನು ಮಾಡಲಪ್ಪಾ! ಮೀನಿನ ಅಡುಗೆಯನ್ನೇನೋ ಮಾಡಿಕೊಟ್ಟೇನು. ಆದರೆ ದುಡ್ಡಿಲ್ಲವಲ್ಲ. ಬದಲಿಗೆ ಒಂದಷ್ಟು ಬಂಗಾರದ ಒಡವೆಗಳಿವೆ. ಅವನ್ನು ಕೊಟ್ಟರೆ ಆಗಬಹುದೋ?" ಎಂದು ಕೇಳಿದಳು

"ಅಯ್ಯೋ, ಬಂಗಾರವಾದರೆ ಇನ್ನೂ ಒಳ್ಳೇದಾಯ್ತಲ್ಲಮ್ಮಾ. ಸ್ವರ್ಗದವರಿಗೆಲ್ಲ ಬಂಗಾರವೆಂದರೆ ಬಹಳ ಹುಚ್ಚಲ್ಲವೆ? ಬಂಗಾರವಿದ್ದವರಿಗೆ ಅವರು ಏನು ಬೇಕಾದರೂ ಸುಖ ಕೊಡುತ್ತಾರೆ" ಎಂದ.

ಕೂಡಲೇ ಆಕೆ ಒಂದು ಪುಟ್ಟ ಗಂಟಿನಲ್ಲಿ ಥಳಥಳ ಬಂಗಾರದ ಆಭರಣಗಳನ್ನು ತಂದು ರೈತನ ಕೈಗೆ ಕೊಟ್ಟಳು. ಲಗುಬಗೆಯಿಂದ ತರತರದ ಮೀನಿನ ಅಡಿಗೆ ಮಾಡಿ ಇವನಿಗೂ ಹೊಟ್ಟೆ ತುಂಬ ಬಡಿಸಿದಳು. ಒಳ್ಳೊಳ್ಳೆಯ ಪಾತ್ರೆಗಳಲ್ಲೂ ಹಾಕಿ ಕೊಟ್ಟಳು. ಎಲ್ಲವನ್ನೂ ತೆಗೆದುಕೊಂಡು ರೈತ ಅವಳ ಕಾಲು ಮುಟ್ಟಿ ನಮಸ್ಕರಿಸುತ್ತ, "ನೀನು ಏನೂ ಚಿಂತೆ ಮಾಡಬೇಡವ್ಮಾ. ಇವತ್ತೇ ಅವನೆಲ್ಲಿದ್ದರೂ ಹುಡುಕಿಕೊಂಡು ಹೋಗಿ ಕೊಟ್ಟುಬಿಡುತ್ತೇನೆ. ಹಾಗೇ ಅವನಿಗೆ ಗುರುತಿಗಾಗಿ ನಿನ್ನದೇನಾದರೂ ಕೊಡು. ನನ್ನ ಗುರುತಿಗೆ ಇಗೋ, ಈ ಕೋಟು ಇಟ್ಟುಕೋ" ಎಂದಾಗ ಅವಳು ಹಿಂದೆ-ಮುಂದೆ ನೋಡದೆ ತನ್ನ ಗಂಡ ತಂದಿದ್ದ ಹೊಸ ಸ್ವೆಟರನ್ನೇ ಕೊಟ್ಟುಬಿಟ್ಟಳು.

ಕೂಡಲೇ ರೈತ ಕುದುರೆ ಹತ್ತಿ ಹಳ್ಳಿಗೆ ದೌಡಾಯಿಸಿದ. ಮನೆಗೆ ಬಂದವನೇ ಹೆಂಡತಿಗೆ ಹೇಳಿದ— "ಇಗೋ, ನಿನಗಿಂತ ದಡ್ಡರು ಇದ್ದಾರೆಂದು ನಾನು ವಾಪ್ಸು ಬಂದೆ.

(5ನೇ ಪುಟಕ್ಕೆ)

ನರಸಿಂಹರಾಜಪುರ ತಾಲ್ಲೂಕಿನ ಮಂಡಲ ಪ್ರಧಾನರು – 5

ಆಡುವಳ್ಳಿ (ಗಡಿಗೇಶ್ವರ) ಮಂಡಲ

ಗದ್ದೆಮನೆಯಿಂದ ಗಡಿಗೇಶ್ವರಕ್ಕೆ 'ಲಕ್' ಹೊಡೆದ ಲಕ್ಷ್ಮೀನಾರಾಯಣ ರಾವ್

ಮೇಲ್ಪಾಲ್ ಜಿ. ನಾಗಪ್ಪಯ್ಯನವರ ಮಗ 39ರ ಹರಯದ ಜಿ. ಲಕ್ಷ್ಮೀನಾರಾಯಣರಾವ್ ಕಾನೂನು ಪದವೀಧರರು (ಬಿ. ಎ., ಬಿ. ಜಿ. ಎಲ್.) ಕಾಲೇಜು ಜೀವನದಲ್ಲಿಯೇ ಸಾರ್ವಜನಿಕ ರಂಗದಲ್ಲಿ ಕಾಣಿಸಿಕೊಂಡವರು. ವಿದ್ಯಾಭ್ಯಾಸದ ನಂತರ ಕೃಷಿಯನ್ನೇ ಅವಲಂಬಿಸಿದ ಇವರು 3–4 ವರ್ಷಗಳ ಕಾಲ ಸ್ಥಳೀಯ ವ್ಯವಸಾಯ ಸೇವಾ ಸಹಕಾರ ಸಂಘದ ಅಧ್ಯಕ್ಷರಾಗಿದ್ದರು.

ಮಂಡಲ ಪಂಚಾಯ್ತಿ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಆಯ್ಕೆಗೊಂಡು ನಂತರ ಮಂಡಲ ಪ್ರಧಾನರ ಆಯ್ಕೆ ಸಮಯದಲ್ಲಿ ಜನತಾ-ಕಾಂಗ್ರೆಸ್ ಮಾರಾಮಾರಿಯಾಗಲಿದ್ದಾಗ ಸದ್ದು ಗದ್ದಲವಿಲ್ಲದೆ ತಮ್ಮ ಪಕ್ಷೇತರ ತನವನ್ನೇ ಮುಂದುವರಿಸಿ ಪ್ರಧಾನರಾಗಿ ಆಯ್ಕೆಯಾದ ಇವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ........

ಹಬ್ಬದ ದಿನಗಳಲ್ಲಿ ಸತ್ತ ಮಕ್ಕಳನ್ನು ನೆನಪು ಮಾಡಿಕೊಳ್ಳುವ ತಾಯಿಯಂತೆ, ಬಹು ಹಿಂದಿನ "ಜನಸಂಘ"ದ ಸದಸ್ಯರಾಗಿದ್ದುದನ್ನು ನೆನಪು ಮಾಡಿಕೊಳ್ಳುವ ಇವರು, ಕಡಲ ಕರೆಯ ಭಾರ್ಗವರ "ಹುಟ್ಟು–ಸಾವಿನ ಅಂತರದಲ್ಲಿ ಸಮಾಜದಲ್ಲಿ ಪಡೆದದ್ದಕ್ಕಿಂತ ಸಮಾಜಕ್ಕೆ ಕೊಟ್ಟಿರುವುದೇ ಹೆಚ್ಚಾಗಿರಬೇಕು" ಎನ್ನುವ ನುಡಿಗೆ ತಾನು ಬದ್ಧ ಎನ್ನುವರು. ಇವರ ಈ 'ದೀಕ್ಷೆ' ಈ ಮಂಡಲದ ಕಾರ್ಯ ಪ್ರಾಪ್ತಿಯಲ್ಲಿ ಎಷ್ಟು ಪ್ರಬುದ್ಧವೊ? ಇಲ್ಲವೆ ಅಪ್ರಬುದ್ಧವೊ! ಕಾದು ನೋಡತಕ್ಕಂಥದಲ್ಲವೆ........?

ಜನತಾದಲ್ಲಿ ಲಕ್ಷ್ಮಿ ಬಿಟ್ಟು, ಕಾಂಗ್ರೆಸ್ಸಿನಲ್ಲಿ ನಾರಾಯಣನಿದ್ದು, ಗೆಲುವಿನ ಹಾದಿ ಸಿಕ್ಕಿದಾಗ ಜನತಾ–ಕಾಂಗ್ರೆಸ್‌ಗಳೆರಡನ್ನೂ ಬಿಟ್ಟು ಪುನಃ 'ಲಕ್ಷ್ಮೀ-ನಾರಾಯಣ'ರೊಂದಾದದ್ದು ಪವಾಡ ಎನ್ನುವುದಕ್ಕಿಂತ ಪರಿಸ್ಥಿತಿಯ ಪ್ರಭಾವ ಎನ್ನುವುದುಚಿತ.

ಪ್ರಭಾವ ಎಂದಾಕ್ಷಣ ತಕ್ಷಣ ನೆನಪಾಗುವುದು–ತಾಲ್ಲೂಕ್ ಜನತಾ ಘಟ(ಕ)ದ ಹೆಮ್ಮರದ ಬುಡದಡಿಯಲ್ಲಿ ಸ್ವತಂತ್ರ ಸಸಿ

(5ನೇ ಪುಟಕ್ಕೆ)

ವೇದಿಕೆ — ಓದುಗರ ಪ್ರತಿಕ್ರಿಯೆಗಳು

11. ನೀ ಹೆಂಗೆ ಬದುಕಿಯೊ ತಮ್ಮಾ .... !

ಪ್ರಿಯ ನಾಗರಾಜ್,

ನಿಮಗೆ ಹಾಕಿರುವುದು ಸಾಮಾಜಿಕ ಬಹಿಷ್ಕಾರವಲ್ಲ, ಜಾತಿ ಬಹಿಷ್ಕಾರ. ಇದು ಅಂತರಜಾತಿ ವಿವಾಹದಂತಹ ಪ್ರಗತಿಪರ ಕಾರ್ಯಕ್ಕೆ ತಮ್ಮನ್ನೇ ಅರ್ಪಿಸಿಕೊಂಡಿರುವ ನಿಮ್ಮನ್ನು ನಿರ್ಬಂಧಿಸಲು ಇರುವ ಕಟ್ಟಕಡೆಯ ಕ್ರಮವೇನಲ್ಲ. ಆನಂತರ ನಿಮಗೆ ಹೆಂಡತಿಯಿಂದ ಬಹಿಷ್ಕಾರ. ಮಕ್ಕಳಿಂದ ಬಹಿಷ್ಕಾರ ಹಾಕಿಸಬಹುದು! ಅದಕ್ಕೂ ಹೇಸದ ಧರ್ಮದೊಳಗಿರುವಾಗ ದಲಿತ ಕವಿ ಹಾಡುತ್ತಾನೆ—

ನೀ ಹೆಂಗೆ ಬದುಕಿಯೊ ತಮ್ಮಾ
ಈ ರಾಕ್ಷಸರ ಧರ್ಮದೊಳಗೆ
ನಿನ ರಕ್ತ ಇಂಗಿರೊವಾಗ

....

ಮಠಾಧಿಪತಿ ಸ್ಥಾನದ ಸ್ವಾಮೀಜಿ 'ನಾನು ವಿದ್ಯೆ ಕಲಿಸುವ ಗುರು' ಎಂದಿದ್ದಾರೆ. ಅಂದರೆ AEO, DDPI ಥರದ ವಿದ್ಯಾಧಿಕಾರಿಗಳೇ? ಅಂತರಜಾತಿ ವಿವಾಹವನ್ನು "ಸ್ವಾರ್ಥಕ್ಕಾಗಿ ಆಗಿದ್ದೀರಿ; ಅದರಲ್ಲಿ ಆದರ್ಶವಾಗಲಿ; ಅಸ್ಪೃಶ್ಯತೆಯ ನಿವಾರಣೆಯಾಗಲಿ ಎಲ್ಲಿ ಬಂತು?" ಅಂತ ಕೇಳಿದ್ದಾರೆ. ಅವರು ಸ್ವಾಮಿಯಾಗಿದ್ದು ಧರ್ಮನಿಷಿದ್ಧವಾದ ಶಾಲೆ,ಪ್ರಾಯಶ್ಚಿತ್ತ ಮಾಡಿಸುವುದು ಕೂಡ ಸ್ವಾರ್ಥವಲ್ಲವೆ? ಅದು ಗೊತ್ತಿದ್ದೂ ಇನ್ನೂ ಹೊಟ್ಟೆಯನ್ನು ಬೆಳೆಸಿಕೊಳ್ಳುತ್ತಿರುವ ಸ್ವಾಮಿಗಳು ಬಡಬಗ್ಗರ ಹೊಟ್ಟೆ ತುಂಬಲು ಸಹಾಯಕರಾಗುವುದು ಯಾವಾಗ?

ಅಂತರಜಾತಿ ವಿವಾಹವನ್ನು ಸಂಪೂರ್ಣವಾಗಿ ತಡೆದೇ ಬಿಡುತ್ತಿದ್ದರು. ಆಪರೇನು ಮಾಡುವುದು? ಅವರಿಗೂ ಮಕ್ಕಳು ಹುಟ್ಟಿಬಿಡುತ್ತವೆ! ಮುಂದೆ ಹಂಗಾಗದಂತೆ ಏನಾದರೂ ಮಂಗಳ ಕಾರ್ಯ ಪೂಜೆ ಸಂತರ್ಪಣೆ ಮಾಡಲಿ ಮಠಾಧಿಪತಿಗಳು. ಆಗ ಎಲ್ಲ ಜಾತಿಗಳ ಮಧ್ಯೆ ವಿವಾಹಿತರನ್ನು ಬೇರ್ಪಡಿಸಿ ಮನೆಗೆ ಶುದ್ಧೀಕರಿಸಿ ಸೇರಿಸಿಕೊಳ್ಳಬಹುದು, ಅಲ್ವಾ?

ಮಠಾಧಿಪತಿಗಳು, ಮುಖಂಡರು, ಬಂಧುಗಳಿಂದ ಬಂದ ಕಷ್ಟಗಳನ್ನು ಎದುರಿಸಿ, ಜಾತಿ ವಿನಾಶದಂತಹ ಕಾರ್ಯವನ್ನು ಬಿಡದೆ ಮುನ್ನುಗ್ಗುತ್ತಿರುವ ಎಲ್ಲರಿಗೂ ನನ್ನ ಸಹಕಾರ, ಬೆಂಬಲ ಇದೆಯೆಂದು ಹೇಳಿ ಪತ್ರ ಮುಗಿಸುವೆ.

—ಗಂಗಾರಾಂ ಚಂಡಾಳ
ಶಂಕರಪುರ, ಚಿಕ್ಕಮಗಳೂರು

12. ಅಂತರಂಗದ ದೃಷ್ಟಿ ಮಾಂದ್ಯ

ಪ್ರಿಯ ಸಂಪಾದಕರೆ,

ಪತ್ರಿಕೆಯ ಎಲ್ಲಾ ಸಂಚಿಕೆಗಳನ್ನೂ ಓದುತ್ತಿದ್ದೇನೆ. 21 6 87ರಲ್ಲಿ ಕಾವಳಿ ಲಕ್ಷ್ಮೀನಾರಾಯಣಪ್ಪ,ಶಾನುವಳ್ಳಿ ಅವರು ಬರೆದ ಪತ್ರ ಓದಿ ನಗು ಬಂತು. ನ್ಯಾಯಾಲಯಕ್ಕೆ ಮೊರೆ ಹೋಗಬೇಕೆ?

ಯಾರು ಹೋಗಬೇಕು? ಇದು ಮೇಲ್ನೋಟಕ್ಕೆ ಸಿರಿಮನೆಯ ಪ್ರಕರಣ ಅನ್ನಿಸಿದರೂ ನಿಜವಾಗಿ ಇಡೀ ಹಿಂದೂ ಧರ್ಮಕ್ಕೆ ಅನ್ಯಾಯ ಆಗಿದೆ. ತಲೆಬುಡ ಇಲ್ಲದ 'ವೇದಾಂತ' ಹೇಳಿ ಅಸ್ಪೃಶ್ಯತೆ ಹೆಚ್ಚಿಸುತ್ತಾ ಹೋದರೆ ಅದರ ಅಪಾಯ ಮುಂದೆ ಇಡೀ ಧರ್ಮಕ್ಕೇ ತಟ್ಟುವುದು. ಪ್ರತಿಯೊಂದಕ್ಕೂ ಶಾಸ್ತ್ರ ಹಿಡಕೊಂಡೇ ಮಾತಾಡುವವರು, "ಮನು ಹೇಳಿದ್ದಾನೆ, ವೈಶಂಪಾಯನ ಹೇಳಿದ್ದಾನೆ"ಂದು ಪುಣ್ಯ ಪುರುಷರಿಗೆ ಅಪವಾದ ಹೊರಿಸುತ್ತಿದ್ದಾರೆಯೇ ವಿನಾ ಪ್ರಗತಿಶೀಲ ಯುಗದಲ್ಲಿ ಸಮಾಜದಲ್ಲಿ ಪ್ರೇಮ ವಿವಾಹ, ಅಸವರ್ಣ ವಿವಾಹಗಳೇಕೆ ನಡೆಯುತ್ತವೆ? ಎಂದು ಯೋಚಿಸುವುದಿಲ್ಲ.

ಹಿಂದಿನಿಂದ ಬಂದಿರುವ ಅಂಧ ಶ್ರದ್ಧೆಗಳನ್ನು ವಿಚಾರ ಸ್ವಾತಂತ್ರ್ಯಕ್ಕೆ ಸೆಳೆಯುತ್ತಿರುವಿರಿ (ವೇದಿಕೆ–ಸಂವಾದದ ಮೂಲಕ) ಇದು ತಪ್ಪೇನಲ್ಲ. ಬ್ರಾಹ್ಮಣರನ್ನು ತೆಗಳುವ ಉದ್ದೇಶ ಇಲ್ಲಿಲ್ಲ ಎನ್ನುವುದನ್ನು ವಿಚಾರವಂತರೆಲ್ಲ ತಿಳಿದುಕೊಳ್ಳಬಲ್ಲರು.

ಸಂಪಾದಕರ ಕನ್ನಡಕದ ಬಗ್ಗೆ ಲಕ್ಷ್ಮೀನಾರಾಯಣಪ್ಪ ಪ್ರಸ್ತಾಪಿಸಿದ್ದಾರೆ. ಕನ್ನಡಕ ಎಂದರೆ ಚಾಳೀಸು–ಇದು ಇರಲಿ ಇಲ್ಲದಿರಲಿ, ಒಳಗಿನ ದೃಷ್ಟಿ ಸಮರ್ಪಕವಾಗಿದೆ. ತಿಳುವಳಿಕೆ ಇದೆ.

ಲಕ್ಷ್ಮೀನಾರಾಯಣಪ್ಪನವರು ಅಂತರಂಗದ ದೃಷ್ಟಿ ಮಾಂದ್ಯದಿಂದ ಮನಸ್ಸಿಗೆ ಕಂಡಂತೆ ಪ್ರತಿಕ್ರಿಯಿಸಬಾರದು ಎಂದು ನಮ್ಮ ಅಭಿಪ್ರಾಯ. ಹೃದಯ ಶುದ್ಧಿಯಿಂದ ವಿಕ್ಷಿಪ್ತ ನಡತೆಗಳನ್ನೂ ವಿಮರ್ಶಾ ದೃಷ್ಟಿಯಿಂದ ನಾವು ಆಲೋಚಿಸಬೇಕು.

—ಎಚ್. ವಿ. ಶ್ರೀವತ್ಸ, ಹುಲಸೆ
ಟಿ. ಎನ್. ಶ್ರೀಧರ, ತೋಟದಮನೆ
ಹೇರೂರು ಅಂಚೆ.

13. "ನಿಮ್ಮಗುರಾಣಿನಾವುಹಿಡಿಯುತ್ತೇವೆ"

ಪ್ರಿಯ ಸಂಪಾದಕರೆ,

ನಿಮ್ಮ ಪತ್ರಿಕೆಯಲ್ಲಿ ನಿಮ್ಮನ್ನು ನೀವು ವಿಮರ್ಶೆಗೆ ಒಳಪಡಿಸಿಕೊಂಡಿರುವುದನ್ನು ವೈಯಕ್ತಿಕವಾಗಿ ನಾನು ಮೆಚ್ಚುತ್ತೇನೆ.

ಈ ನಮ್ಮ ದೇಶ 21ನೇ ಶತಮಾನಕ್ಕೆ ಕಾಲಿಡಬೇಕಾಗಿರುವಾಗಲೂ ಇವತ್ತಿನ ಹೀನ ಪರಿಸ್ಥಿತಿಯಲ್ಲಿರಲು ನಮ್ಮ ದೇಶದ ಜಾತಿಪದ್ಧತಿಯೇ ಕಾರಣ ಎಂದು ನಂಬಿರುವವರಲ್ಲಿ ನಾನೂ ಒಬ್ಬ. ಎಲ್ಲಿಯವರೆಗೂ ಈ ಅನಿಷ್ಟ ಪದ್ಧತಿ ಚಾಲ್ತಿಯಲ್ಲಿರುತ್ತದೊ ಅಲ್ಲಿಯವರೆಗೂ ಇದೇ ಸ್ಥಿತಿ. ತಾನು ಬ್ರಾಹ್ಮಣ ಎಂದ ಕೂಡಲೇ ತಾನೇ ಶ್ರೇಷ್ಠ ಎನ್ನುವ ಬ್ರಾಹ್ಮಣನನ್ನೂ, ತಾನು ಗೌಡ ಎಂದ ಕೂಡಲೆ ಎಲ್ಲರನ್ನೂ ಆಳುವವನು ತಾನೇ ಎನ್ನುವ ಗೌಡನನ್ನೂ, ತಾನು ಮುಸಲ್ಮಾನ ಎಂದ ಕೂಡಲೆ ತಾನು ಪಾಕಿಸ್ತಾನಕ್ಕೆ ಸೇರಿದವನು, ಪಾಕಿಸ್ಥಾನದ ಗೆಲುವು ತನ್ನ ಗೆಲುವು ಎನ್ನುವ ಮುಸ್ಲಿಮನನ್ನೂ, ತಾನು ಕ್ರಿಶ್ಚಿಯನ್ ಆದ ಕೂಡಲೆ ತಾನೇ ಅತಿ ಶ್ರೇಷ್ಠ ಜನಾಂಗದವ ಎನ್ನುವ ಕ್ರಿಶ್ಚಿಯನ್‌ನನ್ನೂ-ನಾವು ಸಮಾನವಾಗಿ ಧಿಕ್ಕರಿಸಿದಾಗಲೇ ಈ ದೇಶಕ್ಕೇನಾದರೂ ಮುಂದಿನ ದಾರಿ ಕಾಣಲು ಸಾಧ್ಯ. ದುರದೃಷ್ಟವಶಾತ್ ಆ ದಿಕ್ಕಿನಲ್ಲಿ ನಾವು ಸಂಪೂರ್ಣ ಕತ್ತಲೆಯನ್ನೇ ಕಾಣುತ್ತಿದ್ದೇವೆ.

ಏನೇ ಆಗಲಿ ನೀವು ತುಳಿದಿರುವ ಹಾದಿ ಸಾಮಾಜಿಕವಾಗಿ ಅತ್ಯುತ್ತಮವಾದುದು. "ಇದು ಸಮಾಜದ ಹೋರಾಟ. ಅದರಲ್ಲಿ ನಾವೊಂದು ಗುರಾಣಿ ಮಾತ್ರ" ಎಂದಿದ್ದೀರಿ. ನಿಮ್ಮ ಗುರಾಣಿ ಹಿಡಿದು ಹೋರಾಡುವ ಚೈತನ್ಯ ನಮಗ ಬರಲಿ ಎಂದು ಹಾರೈಸುತ್ತೇನೆ.

—ಚಂದ್ರಶೇಖರ್, ಮಳಿಗೆ

14. "ಮಠದಲ್ಲೇ ಕೋರ್ಟ್ ಕಲಾಪ ನಡೆಸಲು ಮನವಿ ಮಾಡುತ್ತೇವೆ"

ಸಂಪಾದಕರೆ,

ನೀವುಗಳು ನಮ್ಮ ಸ್ವಾಮೀಜಿಯನ್ನು ಕೋರ್ಟಿಗೆಳೆಯಲು ಯತ್ನಿಸುವುದಾಗಿ ಒಬ್ಬ ಶೃಂಗೇರಿ ಗಣ್ಯರಿಂದ ತಿಳಿದು ಬಂತು. ಆ ಸಮಯದಲ್ಲಿ ನಾವು, ಮಠದಲ್ಲೇ ಕಲಾಪ ನಡೆಸುವಂತೆ ಕೋರ್ಟಿಗೆ ಮನವಿ ಮಾಡುತ್ತೇವೆ ನನಗೆ ರಾಜಕೀಯ, ಕಾನೂನು ಮತ್ತು ಎಲ್ಲಾ ವಿಚಾರಗಳೂ ಸ್ವಲ್ಪ ಮಟ್ಟಿಗೆ ಗೊತ್ತಿವೆ. ನಿಮಗೆ ಉತ್ತರ ಕೊಡಲು ನಾನು ಸಂಪೂರ್ಣವಾಗಿ ಸಮರ್ಥನಿದ್ದೇನೆ.

—ಕಾವಳಿ ಲಕ್ಷ್ಮೀನಾರಾಯಣಪ್ಪ
(ಇಂಗ್ಲೀಷ್ ಪತ್ರದ ಕನ್ನಡಾನುವಾದ)

....

....ನಿಮ್ಮ ಲೇಖನಕ್ಕೆ ನೀವು ಪ್ರತಿಕ್ರಿಯೆ ನಿರೀಕ್ಷಿಸಿದರೆ ನಾವು ನಿರೀಕ್ಷಿಸುವ ಕ್ರಿಯೆಯೇ ಬೇರೆ. ಅದು ದೈವಾಧೀನ. ನಿಮ್ಮಿಂದಾಗದ್ದು.

—ಕಾವಳಿ ಲಕ್ಷ್ಮೀನಾರಾಯಣಪ್ಪ.

(ಇದು ಇವರ ಮೂರನೇ ಪತ್ರ. ಮೊದಲ ಪತ್ರದಲ್ಲಿ, "ನಿಮಗೆ ತೊಂದರೆ, ಅನ್ಯಾಯ ಆಗಿದ್ದರೆ ನ್ಯಾಯಾಲಯಕ್ಕೆ ಮೊರೆ ಹೋಗಿರಿ'' ಎಂದು ಬರೆದಿದ್ದರಷ್ಟೆ. ಅದನ್ನೂ ಇದರ ಜೊತೆಗಿಟ್ಟು ಓದಿಕೊಳ್ಳಿ. —ಸಂ.)

15. ದೊಡ್ಡ ಸಾಧನೆಯಲ್ಲ

ಸಂಪಾದಕರೆ,

ನಿಮ್ಮ ವೈಯಕ್ತಿಕ ಸಮಸ್ಯೆಯನ್ನು ನಿಮ್ಮ ಪತ್ರಿಕೆಯಲ್ಲೇ ಕೊಟ್ಟಿದ್ದೀರಿ. ಆದರೆ ನಿಮ್ಮ ಸಮಸ್ಯೆ ನಾಲ್ಕು ದಿನ ಮಾತ್ರ. ಆನಂತರ ಊರವರು ಮಾಮೂಲಿನಂತಿರುತ್ತಾರೆ. ಏಕೆಂದರೆ ಹಿಂದೆ ಈ ರೀತಿ ಬೇಕಾದಷ್ಟು ನಡೆದಿವೆ, ಮುಂದೆಯೂ ಬೇಕಾದಷ್ಟು ನಡೆಯುತ್ತವೆ. ಇದೇನೂ ನಿಮ್ಮ ದೊಡ್ಡ ಸಾಧನೆಯಲ್ಲವೆಂದು ನನ್ನ ಅನಿಸಿಕೆ.

—ಹ. ಭುಜಂಗರಾವ್,
ಹಡ್ಲುಕೊಡಿಗೆ, ಕೊಪ್ಪ

16. ಧರ್ಮಶಾಸ್ತ್ರವನ್ನು ಎಲ್ಲರಿಗೂ ಅನ್ವಯಿಸಿದರೆ ಹೀಗಾದೀತಲ್ಲವೆ?

ಮಾನ್ಯರೆ,

ನಿಮ್ಮ 7–6–87ರ ಪತ್ರಿಕೆಯಲ್ಲಿ ಪ್ರಕಟವಾದ "ಹೆತ್ತ ಮಕ್ಕಳಿಗೆ ತಂದೆಯ ಮನೆಯಿಂದಲೇ ಬಹಿಷ್ಕಾರ, ವೃದ್ಧ ತಂದೆ–ತಾಯಿಗಳಿಗೆ ಬಲಾತ್ಕಾರದ ಪ್ರಾಯಶ್ಚಿತ್ತ!" ಲೇಖನವನ್ನು ನೋಡಿ ತುಂಬಾ ವಿಷಾದವಾಯಿತು. ನಿಮಗೆ ಎದುರಾಗಿರುವ ನೈಜ ವಿಷಯವನ್ನೇ ಮುಚ್ಚುಮರೆಯಿಲ್ಲದೆ ಪತ್ರಿಕೆಯಲ್ಲಿ ಪ್ರಕಟಿಸಿದ್ದು ಮೆಚ್ಚುವಂಥದ್ದು. ಈ ಸಮಸ್ಯೆ ಒಬ್ಬ ಸಂಪಾದಕರದಾಗಿರಲಿ, ಇತರರದಾಗಲಿ, ಎಲ್ಲಾ ಒಂದೇ. ಲೇಖನ ಓದುತ್ತಾ ಓದುತ್ತಾ ಈ ಜಾತೀಯ. ಭಾವನೆ, ಎಲ್ಲವನ್ನೂ ವಿರೋಧಿಸ ಹೊರಟ ಕುಟುಂಬಕ್ಕೇ ಜಾತಿಯಿಂದ ಬಹಿಷ್ಕಾರ, ವೃದ್ಧರಾದವರ ಮೇಲೆ ಈ ಜಾತೀಯ ಒತ್ತಡ, ಇದಕ್ಕೆ ಸಿಕ್ಕ ನಿಮ್ಮ ವೃದ್ಧ ತಂದೆ–ತಾಯಿಗಳ ಮನಸ್ಸನ್ನು ಪರಿವರ್ತಿಸಲು ಪ್ರಯತ್ನಿಸಿದ್ದು, ಇವೆಲ್ಲ ಕಣ್ಣಿಗೆ ಕಟ್ಟುತ್ತದೆ. ವೈಜ್ಞಾನಿಕವಾಗಿ ಮುಂದುವರಿದ ನಾವು, ಜಾತ್ಯತೀತ ರಾಷ್ಟ್ರ ಎನ್ನುವ ನಾವೇ ಈ ಜಾತೀಯ ವಿಷ ಬೀಜವನ್ನು ಮುಗ್ಧರಲ್ಲಿ ಬೆಳೆಸುತ್ತಿರುವುದು ಸಹಿಸಲಾರದ ವಿಚಾರ

ಈ ಮಠಾಧೀಶರು ಧರ್ಮ ಪ್ರಚಾರಕರೆ? ಜಾತಿ ಪ್ರಚಾರಕರೆ? ಅಥವಾ ಜಾತಿ ಬಿಟ್ಟ ಮಕ್ಕಳಿಂದ ತಂದೆ–ತಾಯಿಗಳನ್ನು ಬೇರೆ ಮಾಡುವವರೆ? ಇಂದು ಈ ಸಮಾಜದ ಏಳಿಗೆ ಬಯಸುವವರು, ಅದರಲ್ಲೂ ಸಮಾಜಕ್ಕೆ ಮಾರ್ಗದರ್ಶನ ನೀಡಬೇಕಾದ ಜವಾಬ್ದಾರಿ ಇರುವ ಮಠಾಧೀಶರು, ಜನರಲ್ಲಿ ವೈಜ್ಞಾನಿಕ ಭಾವನೆಯನ್ನು, ವಿಶಾಲ ಮನೋಭಾವವನ್ನು ಬೆಳೆಸಬೇಕೇ ವಿನಃ ಇಂತಹ ನೀಚ ಕಾರ್ಯಕ್ಕೆ ಇಳಿದಿದ್ದು ವಿಷಾದನೀಯ. ಇಂತಹ ಮನೋಭಾವನೆಯ ಮಠಾಧೀಶರು ಇರುವ ತನಕ ನಮ್ಮ ದೇಶದಲ್ಲಿ ಖಂಡಿತಾ ಈ ಜಾತೀಯತೆ, ಕೋಮು ಭಾವನೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲ.

ಇಲ್ಲಿ ನಿಮ್ಮ ತಾಯಿಯ ಹೃದಯವನ್ನು ಮೆಚ್ಚುವಂತಹದ್ದು. "ನಾನು ಮಾತ್ರ ನನ್ನ ಮಕ್ಕಳನ್ನು ತೊರೆಯುವವಳಲ್ಲ. ನನಗೆ ಯಾರೂ ನಿರ್ಬಂಧ ಮಾಡಕೂಡದು!" ಈ ಮಾತು ಅಂತಃಕರಣ ಕಲಕುವಂತಹುದು. ಎಷ್ಟು ನೋವು, ಸಂಕಟದಿಂದ ಈ ಮಾತನ್ನು ಅವರು ಹೇಳಿರಬಹುದು! ಆದರೂ ಈ ಸಮಾಜ ಅಂತಹ ವಿಶಾಲ ಮನೋಭಾವದ ವೃದ್ಧ ತಾಯಿಯನ್ನೂ ದೂರಿಡಲು ಸಹಾಯಕವಾಯ್ತಲ್ಲ !

(4ನೇ ಪುಟಕ್ಕೆ)

ವೇದಿಕೆ

17. "ಈ ಮದ್ದಿಲ್ಲದ ರೋಗ ಉಲ್ಬಣಿಸದಂತೆ ಕಾರ್ಯಪ್ರವೃತ್ತರಾಗೋಣ"

ಪ್ರಿಯ ನಾಗರಾಜ್,

....ಕೇವಲ ಒಂದು ಅಂತರಜಾತೀಯ ಮದುವೆಯ ವಿಚಾರಕ್ಕೆ ನಿಮ್ಮ ಬಳಗದ ಇಬ್ಬರು ಸೋದರಿಯರು ಪ್ರಾಣ ಕಳೆದುಕೊಳ್ಳುವ ಹಂತ ತಲುಪಬೇಕಾದರೆ ಇದರ ಹಿಂದಿನ ಕುಟಿಲ ಜಾತಿವಾದಿಗಳ ಸಂಚು ಎಷ್ಟು ತೀವ್ರವಾಗಿದೆ ಎಂಬುದು ಅರಿವಾಯ್ತು. ನಿಮ್ಮೆಲ್ಲರ ದುಃಖದಲ್ಲಿ ನಾನು ಕೂಡ ಭಾಗಿಯಾಗಿರುವುದು ಮಾತ್ರವಲ್ಲ, ಈ ಬಗ್ಗೆ ನಾವೆಲ್ಲ ತ್ವರಿತವಾಗಿ ಏನಾದರೂ ಮುಂದುವರಿಯದಿದ್ದಲ್ಲಿ ಇನ್ನೂ ಎಷ್ಟೋ ಅನಾಹುತಗಳು ಜರುಗಬಹುದು. ಅಲ್ಲದೆ ಈ ಮದ್ದಿಲ್ಲದ ರೋಗ ಉಲ್ಬಣಿಸುವುದಕ್ಕೂ ಹೆಚ್ಚು ಕಾಲ ಬೇಕಿಲ್ಲ. ಆದ್ದರಿಂದ ಖಂಡಿತಾ ಈ ಸಂಬಂಧದಲ್ಲಿ ಸೂಕ್ತವಾದುದನ್ನು ಕೂಡಲೇ ಮಾಡೋಣ........

—ಸತ್ಯಮೂರ್ತಿ ಆನಂದೂರು
'ಲಂಕೇಶ್ ಪತ್ರಿಕೆ', ಬೆಂಗಳೂರು.

ಧರ್ಮಶಾಸ್ತ್ರವನ್ನು ಎಲ್ಲರಿಗೂ ಅನ್ವಯಿಸಿದರೆ....

(3ನೇ ಪುಟದಿಂದ)

ಪಂಚಗವ್ಯವನ್ನು ಕುಡಿಸಿ ಶುದ್ಧಿ ಮಾಡುವ ವಿಚಾರ ಓದಿ ನಗು ಬಂತು. ಧರ್ಮಶಾಸ್ತ್ರದ ಪ್ರಕಾರ ಬಹಿಷ್ಕಾರ ಹಾಕುತ್ತ ಹೋದರೆ ಯಾರೂ ಬ್ರಾಹ್ಮಣ ಜಾತಿಯಲ್ಲಿ ಉಳಿಯಲಿಕ್ಕಿಲ್ಲ! ಪಂಚಗವ್ಯ ಕುಡಿಸುವುದಾದರೆ ಇಡೀ ಜಾತಿಗೇ ಕುಡಿಸಬೇಕಾದೀತು! ಇನ್ನು ಬ್ರಾಹ್ಮಣರಲ್ಲದವರ ಪಾಡಂತೂ ಹೇಳಬೇಕಾದ್ದೇ ಇಲ್ಲ—ಕಿವಿಯಲ್ಲಿ ಕಾದ ಸೀಸ ಹೊಯ್ದೋ, ನಾಲಿಗೆ ಕತ್ತರಿಸಿಯೋ....

ಇನ್ನಾದರೂ ಈ ಸಮಾಜ ಮತ್ತು ಮಠಾಧೀಶರುಗಳು ಜಾತೀಯ ಮೇಲು-ಕೀಳು ಭಾವನೆಗಳನ್ನು ಬೆಳೆಸಬಾರದೆಂದೇ ನನ್ನ ಆಶಯ.

—ಪ್ರೇಮಾ ಕೌಲಾನಿ,
ತೀರ್ಥಹಳ್ಳಿ.

18. ಎಲ್ಲವೂ ಕಾಲಕ್ಕೆ ತಕ್ಕಂತೆ; ಮತ್ತೆ ಈ ಬೊಬ್ಬೆಯೇಕೆ ?

ಮಾನ್ಯರೆ,

ಬ್ರಾಹ್ಮಣರು ಅಂದರೆ ಯಾರು? ಎಂಬ ಪ್ರಶ್ನೆ.

'ಬ್ರಹ್ಮಜ್ಞಾನಂ ಯಸ್ಯ ಸಃ ಬ್ರಾಹ್ಮಣಃ' ಅರ್ಥಾತ್ ಬ್ರಹ್ಮನ (ಆದಿ ಸೃಷ್ಟಿಯ) ಜ್ಞಾನ ಯಾರಿಗೆ ಉಂಟೋ ಅವನೇ ಬ್ರಾಹ್ಮಣ. ಅವನ ಭಾಷೆ ಯಾವುದು, ಲಿಪಿ ಯಾವುದು? ಭಾಷೆ ಸಂಸ್ಕೃತ, ಲಿಪಿ ದೇವನಾಗರಿ, ಅಲ್ಲವೆ? ನಮ್ಮ ವೇದ-ವೇದಾಂತ-ಉಪನಿಷತ್ತುಗಳು, ಪುರಾಣ-ಧರ್ಮ ಶಾಸ್ತ್ರಗಳೆಲ್ಲ ಇರುವುದೂ ಸಂಸ್ಕೃತ ಭಾಷೆ, ದೇವನಾಗರ ಲಿಪಿಯಲ್ಲಿಯೇ.

ಕಾಲಕ್ಕೆ ಅನುಸಾರವಾಗಿ ನಮ್ಮವರು ಆಯಾ ರಾಜ್ಯದ ದ್ರಾವಿಡ ಭಾಷೆಗಳಲ್ಲಿ (ಕನ್ನಡ, ತಮಿಳು, ತೆಲುಗು, ಮಲಯಾಳ) ಅಭ್ಯಾಸ ಮಾಡತೊಡಗಿದರು. ಅಂದರೆ ತತ್ಸಮ ಹೋಗಿ ತದ್ಭವ ಆಯಿತು. ಕ್ರಮೇಣ ನಮ್ಮವರು ಪೂಜಾ-ಸ್ನಾನ ವಿಧಿಗಳನ್ನೆಲ್ಲ ಮರೆತರು, ನಿತ್ಯ ಕರ್ಮಗಳೆಲ್ಲ (ಪ್ರಾತಃಕಾಲದಲ್ಲಿ ಎದ್ದು ಸ್ನಾನ, ಗಾಯತ್ರಿ ಜಪ ಇತ್ಯಾದಿ) ದೂರಾದವು. ಬರೀ ನಾಮ-ಜನಿವಾರ ಇತ್ಯಾದಿಗಳು ಮಾತ್ರ ಉಳಿದವು. ಹಾಗೆಯೇ ಗಂಟೆ-ಜಾಗಂಟೆ-ಶಂಖನಾದಗಳಿಂದ ಆರತಿ ತೋರಿಸುವ ಕ್ರಮ ಮಾತ್ರ ಉಳಿಯಿತು. ತದ್ಭವ ಹೋಗಿ ಲೋಪ ಬಂತು. ಇದೆಲ್ಲ ಆಗಿರುವುದು ಕಾಲಕ್ಕೆ ಅನುಸಾರವಾಗಿ ಅಲ್ಲವೆ?

ಇದೇ ರೀತಿ, ಪ್ರಗತಿಶೀಲ ಸಮಾಜದಲ್ಲಿ ಅಂತರ ಜಾತಿ ವಿವಾಹಗಳನ್ನು ವಿರೋಧಿಸಿ, ಗುಲ್ಲೆಬ್ಬಿಸಿ, ಡೊಂಬರಾಟ ಮಾಡಿ ಬಹಿಷ್ಕಾರ-ಪ್ರಾಯಶ್ಚಿತ್ತ ಇತ್ಯಾದಿ ಮಾಡುವುದೂ ಬರೀ ದೇಖಾವೆಗೆ ಮಾತ್ರ ಅಲ್ಲವೆ? ಯಾಕೆಂದರೆ ಮೇಲೆ ಕಾಣಿಸಿದಂತೆ ಇಂದು ಯಾವ ಬ್ರಾಹ್ಮಣನಲ್ಲೂ ಬ್ರಾಹ್ಮಣತ್ವ ಏನೂ ಉಳಿದಿಲ್ಲ. ಈವತ್ತಿನ ಮಠಾಧಿಪತಿಗಳು ಕೂಡ ಬ್ರಾಹ್ಮಣರಾಗಿ ಉಳಿದಿದ್ದೇವೆಂದು ಹೇಳಿಕೊಳ್ಳಬಲ್ಲರೋ?

ಇದೆಲ್ಲ ಬರೀ ಜನಿವಾರ ತೋರಿಸಿ, ತಮ್ಮ ಕುಂದು-ಕೊರತೆ, ಲೋಪ-ದೋಷಗಳನ್ನು ಅಡಗಿಸಿಡುವುದಕ್ಕೆ ಮಾಡುವುದಲ್ಲವೆ? ಈ ಮುಖಂಡರುಗಳಾದರೂ "ಬ್ರಾಹ್ಮಣ್ಯ ಹೋಯಿತು, ಹೋಹೋಹೋಹೋ...." ಎಂದು ಬೊಬ್ಬಿಡುವುದಾದರೂ ತಮ್ಮ ಹೊಟ್ಟೆ ಹೊರೆದುಕೊಳ್ಳಲಿಕ್ಕೆ ಅಲ್ಲವಾ— ತಾನು ಪ್ರವಾಹದಲ್ಲಿ ತೇಲಿಹೋಗುತ್ತಿದ್ದ ನರಿ 'ಪ್ರಪಂಚ ತೇಲಿಹೋಗ್ತಿದೆ, ಹೋ....' ಎಂದಂತೆ?

ಕಡೇ ಪಕ್ಷ ಮಾನಸಿಕವಾಗಿಯಾದರೂ 'ಬ್ರಾಹ್ಮಣ'ರಾಗಬಲ್ಲವರು ಯಾರೂ ಈ ಎಲ್ಲ ಡೊಂಬರಾಟಗಳಲ್ಲಿ ಸೇರಲಿಕ್ಕಿಲ್ಲ.

'ಘಟಶ್ರಾದ್ಧ' ಎಂದರೇನು? ಹಿಂದಿನ ಕಾಲದಲ್ಲಿ ಬ್ರಹ್ಮಚಾರಿಯು ಸನ್ಯಾಸ ದೀಕ್ಷೆ ತೆಗೆದುಕೊಳ್ಳುವಾಗ, ತನಗೆ ಮುಂದೆ 'ಕರ್ಮ' ಮಾಡುವ ಉತ್ತರಾಧಿಕಾರಿ ಯಾರೂ ಇರುವುದಿಲ್ಲವೆಂಬ ಕಾರಣಕ್ಕೆ ತನ್ನ ಶ್ರಾದ್ಧ ತಾನೇ ಮಾಡುವ ಕ್ರಮವಿತ್ತು. ಆ ನಂತರ ನಾಪತ್ತೆ, ದೇಶಾಂತರ ಇತ್ಯಾದಿ ಕಾರಣಗಳಿಂದ ಕಾಣೆಯಾದವರು ಎಲ್ಲೋ ಸತ್ತರೆ ಅವರ ಪ್ರೇತ ಬಾಧೆ ತಟ್ಟುತ್ತೆ ಎಂದು ನಂಬಿ (ನಂಬಿಸಿ) ಕಾಣೆಯಾದವರ ಘಟಶ್ರಾದ್ಧ ಮಾಡಲಿಕ್ಕೆ ಶುರು ಆಯಿತು. ಈಗ ಕಣ್ಣೆದುರು ಇದ್ದವರದೇ ಘಟಶ್ರಾದ್ಧ ಮಾಡುತ್ತಾರೆ.

ಇದೂ ಕಾಲಚಕ್ರ, ಅಲ್ಲವೆ?

—ಕೆ ಭವಾನಿಶಂಕರ್,
ಕುಲಶೇಖರ್, ಮಂಗಳೂರು-5

19. ಐತಿಹಾಸಿಕ ಬಿಕ್ಕಟ್ಟಿನಲ್ಲಿ ಬ್ರಾಹ್ಮಣ ಸಮಾಜ

ಪ್ರಿಯ ಶ್ರೀ ನಾಗರಾಜ್,

ನಿಮ್ಮ ಲೇಖನಗಳನ್ನು ಓದಿದೆ. ಅಲ್ಲಿನ ಘಟನಾವಳಿಗಳ ಗಂಭೀರ ಸ್ವರೂಪ ಅರ್ಥವಾಯಿತು. ಧರ್ಮದ ಹೆಸರಿನಲ್ಲಿ ನಡೆದಿರುವ ಈ ಬರ್ಬರ ಮಾನಸಿಕ ಹಿಂಸೆ ನಮ್ಮ ಧಾರ್ಮಿಕ ನಂಬಿಕೆಗಳ, ಮಠ-ಮಾನ್ಯಗಳ ಗುಪ್ತ ಕಾರ್ಯವನ್ನು ಬಯಲು ಮಾಡಿದೆ. ಮನುಷ್ಯನ ಅಂತಃಸಾಕ್ಷಿಗೆ, ಸ್ವಾತಂತ್ರ್ಯಪ್ರಜ್ಞೆಗೆ ಅಡ್ಡ ಬರುವ ಈ ಧಾರ್ಮಿಕ ಸಂಸ್ಥಾನಗಳ ಬೋಟಾ ಮಾನವೀಯತೆಯನ್ನು ಇದು ಬಯಲು ಮಾಡಿದೆ.

ನನಗನ್ನಿಸುವ ಹಾಗೆ ಇಂದು ಬ್ರಾಹ್ಮಣ ಸಮಾಜ ಐತಿಹಾಸಿಕ ಬಿಕ್ಕಟ್ಟಿಗೆ ಸಿಕ್ಕಿಹಾಕಿಕೊಂಡಿದೆ. ಅದು ಜಾತಿಯನ್ನು ಮೀರದೆ ಹೋದರೆ, ಪರಂಪರಾಗತ ಆತ್ಮಘಾತುಕತನದಿಂದ ಹೊಲಸೆಬ್ಬಿಸಿಕೊಂಡಿರುವ ತನ್ನ ಬಳಗವನ್ನು ಶುದ್ಧೀಕರಿಸಿಕೊಳ್ಳದೆ ಹೋದರೆ, ಅಂದರೆ ಒಟ್ಟಾರೆ ಶೂದ್ರ ಸಮೂಹದೊಡನೆ ಒಂದುಗೂಡದಿದ್ದರೆ, ಒಂದು ರಕ್ತಹೀನ ಜನಾಂಗವಾಗಿ ತನ್ನನ್ನೇ ತಾನು ಆತ್ಮಹತ್ಯೆಗೆ ಗುರಿಪಡಿಸಿಕೊಳ್ಳುತ್ತದೆ.

ಆದರೆ, ಈ ಮೀರುವ ಕ್ರಿಯೆ ಪ್ರಜ್ಞಾವಂತರಿಂದ ನಡೆದಾಗಲೆಲ್ಲ ಧರ್ಮ ಪೀಠಗಳಿಗೆ ಬಿಕ್ಕಟ್ಟು ಬರುತ್ತದೆ; ಹುಸಿ ಧರ್ಮಿಕತೆಯ ಅವುಗಳ ಅಸ್ತಿತ್ವ ಅಲ್ಲಾಡತೊಡಗುತ್ತದೆ. ಅಂದರೆ ಈ ಪೀಠಗಳ 'ಧರ್ಮಛತ್ರಿಯ' ಅಡಿ ನಡೆಯುವ ಪಟ್ಟಭದ್ರಹಿತಾಸಕ್ತಿಗಳ ಶೋಷಣೆಯ ವ್ಯೂಹ ಅಲುಗುತ್ತದೆ ಆವಾಗಲೆಲ್ಲ, ಮಠಾಧಿಪತಿಗಳು, ಧರ್ಮದ ಗುತ್ತಿಗೆದಾರರು 'ಧರ್ಮ, ಸಂಕಟಕ್ಕೆ ಸಿಕ್ಕಿದೆ' ಎಂದು ಹಲುಬತೊಡಗುತ್ತಾರೆ.

ಅಂಥ 'ಶಾಕ್' ಒಂದನ್ನು ಸ್ಥಳೀಯ ಧಾರ್ಮಿಕ ಮೂಲಭೂತವಾದಿಗಳಿಗೆ ನೀವು ಕೊಟ್ಟಿದ್ದೀರಿ ಎಂಬುದು ಅಲ್ಲಿನ ಘಟನಾವಳಿಗಳಿಂದ ಸ್ಪಷ್ಟವಾಗುತ್ತದೆ. ಈ ಕಾರಣಕ್ಕಾಗಿಯೇ ಪ್ರತಿಗಾಮಿ ಶಕ್ತಿಗಳಿಂದ ನೀವು ಎದುರಿಸಬೇಕಾಗಬಹುದಾದ ಭೀಕರ ಸವಾಲುಗಳ ಕಲ್ಪನೆ ನಮಗಿದೆ. ನಿಮ್ಮ ಹೋರಾಟದಲ್ಲಿ ಸಾಮಾಜಿಕ ಕಳಕಳಿಯುಳ್ಳ ಎಲ್ಲ ಪ್ರಗತಿಶೀಲರೂ ಸಹ ಭಾಗಿಗಳಾಗುತ್ತೇವೆ.

ಜಾತೀಯತೆ, ಕಂದಾಚಾರಗಳ ವಿರುದ್ಧ ಆರಂಭದಿಂದಲೂ ನಿಮ್ಮ ಪತ್ರಿಕೆ ತಾಳಿದ ಧೋರಣೆ, ತನ್ನ ಸಾಧ್ಯತೆಯ ಮಿತಿಯಲ್ಲೇ ಪ್ರಗತಿಪರ ವಿಚಾರಗಳತ್ತ ಜನರನ್ನು ಚಿಂತನೆಗೆ ಹಚ್ಚಿದ ಕ್ರಿಯೆ ಹೆಮ್ಮೆಯಿಂದ ಮೆಚ್ಚಬೇಕಾದದ್ದು.

—ಕಂ. ಕೆ. ಮೂರ್ತಿ,
ಚಿಕ್ಕಮಗಳೂರು.

ಚರ್ಚೆಯನ್ನು ಹೂತು ಹಾಕುವ ಯತ್ನವೇಕೆ ? ಪ್ರಶ್ನೆಗಳನ್ನೆತ್ತಿದ್ದೇವೆ, ಉತ್ತರ ಕಂಡುಕೊಳ್ಳಿ

ಪ್ರಿಯ ಓದುಗರೆ,

ತಾ|| 7.6.87 ಹಾಗೂ 14.6 87ರ ನಮ್ಮ ಪತ್ರಿಕೆಯಲ್ಲಿ ಪ್ರಕಟವಾದ, ಬಹಿಷ್ಕಾರ, ಶುದ್ಧೀಕರಣ ಮತ್ತು ಪ್ರಾಯಶ್ಚಿತ್ತದ ವಿವರಗಳು ಹಾಗೂ ಹರಿಹರಪುರ ಮಠಾಧೀಶರ ಸಂದರ್ಶನ—ಇವೆಲ್ಲ ಸಂಪೂರ್ಣ ಸತ್ಯಸಂಗತಿಗಳು. ಅದೆಲ್ಲ ಕಲ್ಪನೆ, ಸುಳ್ಳು ಮುಂತಾಗಿ ಹಬ್ಬಿಸಲಾಗುತ್ತಿರುವ ಪ್ರಚಾರಗಳಿಗಾಗಲಿ, ನಮ್ಮ ತಂದೆ-ತಾಯಿಗಳನ್ನು ಸುಳ್ಳರಾಗುವಂತೆ ಮಾಡಿ ಅವರಿಂದ ಕೊಡಿಸಿದ ಹೇಳಿಕೆಗಾಗಲಿ ನಾನು ಯಾವ ಪ್ರತಿಕ್ರಿಯೆಯನ್ನೂ ಕೊಡಬೇಕಾದ್ದಿಲ್ಲವೆಂದು ಭಾವಿಸಿದ್ದೇನೆ.

ನಡೆದ ಸಂಗತಿಯ ಬಗೆಗಿನ ಸತ್ಯವನ್ನು ಎತ್ತಿ ತೋರಿಸಿದ್ದೇವೆ. ಅದನ್ನು ಮುಖಾಮುಖಿ ಎದುರಿಸುವ ಪ್ರಾಮಾಣಿಕತೆಯುಳ್ಳವರ ವಸ್ತುನಿಷ್ಠ ಪ್ರತಿಕ್ರಿಯೆಗಳಿಗೆ ಸ್ವಾಗತವುಂಟು. ಸತ್ಯವನ್ನೆದುರಿಸಲಾರದೆ ಮಹಾಭಾರತದ ದುರ್ಯೋಧನನಂತೆ ಕೆಸರ ಹೊಂಡದಲ್ಲೆಲ್ಲೋ ಆಶ್ರಯ ಪಡೆಯುವ ಜೀವಗಳ್ಳರ ಬಗ್ಗೆ ಯಾರೇನೂ ಮಾಡಲು ಬರುವುದಿಲ್ಲ.

ಇದು ಒಂದು ಕುಟುಂಬದ ವೈಯಕ್ತಿಕ ಸಮಸ್ಯೆ ಮಾತ್ರ, ಸುದ್ದಿಗೆ ಅರ್ಹವಾದುದಲ್ಲ ಎಂದು ವಾದಿಸುವ ಮೂಲಕ ಈ ವಿಚಾರದ ಚರ್ಚೆಯನ್ನು ಹೂತುಹಾಕಬಯಸುವವರು ಮೊದಲು ನಾವು ಎತ್ತಿರುವ ಕೆಲವು ಪ್ರಶ್ನೆಗಳಿಗೆ ಪ್ರಾಮಾಣಿಕವಾಗಿ ಉತ್ತರ ಕಂಡುಕೊಳ್ಳಿ.

—ಸಿರಿಮನೆ ನಾಗರಾಜ

ಅಂಗವಿಕಲ ಅಭ್ಯರ್ಥಿಗಳಿಗೆ ಉಚಿತ ತರಬೇತಿ

ಚಿಕ್ಕಮಗಳೂರು: ಜಿಲ್ಲೆಯ ಅಂಗವಿಕಲರು ಲಾಭದಾಯಕವಾದ ಸ್ವಂತ ಉದ್ಯೋಗವನ್ನು ಅವಲಂಬಿಸಿ ಸ್ವಯಂ ಉದ್ಯೋಗಿಗಳಾಗಲು ಅನುಕೂಲವಾಗುವ ಹಾಗೂ ಅಂಗವಿಕಲರು ಇತರೆ ಯಾವುದೇ ಸಮರ್ಥ ವ್ಯಕ್ತಿಗಳಂತೆ ಸ್ವಂತ ಉತ್ಪಾದನೆ ಮತ್ತು ಗೌರವಯುತವಾದ ಜೀವನ ನಡೆಸಲು ಮಾರ್ಗದರ್ಶನ ನೀಡುವ ಸಲುವಾಗಿ ಕೇಂದ್ರ ಸರ್ಕಾರದ ಕಾರ್ಮಿಕ ಸಚಿವಾಲಯದ ಅಂಗವಿಕಲರ ವೃತ್ತಿ-ಪುನರ್ವಸತಿ ಕೇಂದ್ರ, ಬೆಂಗಳೂರು ಇವರ ಸಹಯೋಗದೊಡನೆ ತರಬೇತಿ ಶಿಬಿರವೊಂದನ್ನು ಅಂಗವಿಕಲ ಪುರುಷ ಮತ್ತು ಮಹಿಳೆಯರಿಗಾಗಿ ವ್ಯವಸ್ಥೆ ಮಾಡಲಾಗುವುದು. ಈ ತರಬೇತಿಯನ್ನು ಪಡೆದುಕೊಂಡ ಅಂಗವಿಕಲರಿಗೆ ವಿವಿಧ ಕ್ಷೇತ್ರಗಳಲ್ಲಿ ವೃತ್ತಿಯನ್ನು ದೊರಕಿಸಿಕೊಳ್ಳಲು ಸಹ ಮಾರ್ಗದರ್ಶನ ನೀಡಲಾಗುವುದು.

ಕುರುಡರು, ಕಿವುಡರು, ಮೂಕರು, ಕೈ ಅಥವಾ ಕಾಲು ಕಳೆದುಕೊಂಡವರು, (ವಿದ್ಯಾವಂತ ಅಥವಾ ಅವಿದ್ಯಾವಂತ, ಪುರುಷರು ಮತ್ತು ಮಹಿಳೆಯರು, 16 ರಿಂದ 45 ವರ್ಷ ಒಳಗಿರುವವರು) ಈ ತರಬೇತಿಗೆ ಅರ್ಹರಾಗಿರುತ್ತಾರೆ ಚಿಕ್ಕಮಗಳೂರು ಜಿಲ್ಲೆಯ ಇಂಥ ಅಂಗವಿಕಲರು ತಮ್ಮ ಹೆಸರು ಮತ್ತು ಇತರೆ ಮಾಹಿತಿಗಳನ್ನು ದಿನಾಂಕ: 10.7. 1987ರ ಒಳಗೆ ಯುವಜನ ಸಂ

(5ನೇ ಪುಟಕ್ಕೆ)

ಓದುಗರ ಪತ್ರ

ಬೆಂಗಳೂರು - ನ. ರಾ. ಪುರ - ಶೃಂಗೇರಿ ಬಸ್ಸಿನ ವೇಳಾ ಪಟ್ಟಿ ಬದಲಿಸಿ

ನಮಸ್ಕರೇ,

ಇದುವರೆಗೆ ನರಸಿಂಹರಾಜಪುರದಲ್ಲಿ ತಂಗುತ್ತಿದ್ದ ಕರ್ನಾಟಕ ರಾಜ್ಯ ಸಾರಿಗೆಯ ನರಸಿಂಹರಾಜಪುರ–ಬೆಂಗಳೂರು ಬಸ್‌ನ್ನು ಶೃಂಗೇರಿಯವರೆಗೆ ಓಡಿಸುತ್ತಿರುವುದು ಸ್ವಾಗತಾರ್ಹ. ಆದರೆ ಈಗ ನಿರ್ದಿಷ್ಟ ಕಾಲದ ಪರಿಮಿತಿ ಇಲ್ಲದೇ ಖಾಲಿಯಾಗಿ ನರಸಿಂಹರಾಜಪುರ ಮತ್ತು ಶೃಂಗೇರಿ ನಡುವೆ ಓಡುತ್ತಿರುವ ಈ ಬಸ್ ಸಂಜೆ 5–30 ಕ್ಕೆ ನ.ರಾ. ಪುರವನ್ನು ಬಿಡುವಂತೆ ವ್ಯವಸ್ಥೆ ಮಾಡಿದರೆ ಪ್ರಯಾಣಿಕರಿಗೆ ಬಹಳ ಅನುಕೂಲವಾಗುತ್ತದೆ. ಏಕೆಂದರೆ ಸಂಜೆ 4–30 ಕ್ಕೆ ನ.ರಾ. ಪುರವನ್ನು ಬಿಟ್ಟು ಕೊಪ್ಪ ಮಾರ್ಗವಾಗಿ ಶೃಂಗೇರಿ ತಲುಪುವ ಬೀರೂರು–ಶೃಂಗೇರಿ (ಶಂಕರ್ ಟ್ರಾನ್ಸ್‌ಪೋರ್ಟ್) ಬಸ್ಸಿನ ನಂತರ 6–45 ರವರೆಗೂ ಕೊಪ್ಪದ ಕಡೆಗೆ ಯಾವ ಬಸ್ ವ್ಯವಸ್ಥೆಯೂ ಇಲ್ಲವಾಗಿದೆ. ಹೀಗೆ ಶಾಲಾ ಕಾಲೇಜುಗಳು, ಸರ್ಕಾರಿ ಕಛೇರಿಗಳು ಮುಗಿಯುವ ಕಾಲದಲ್ಲಿ (ಪೀಕ್ ಅವರ್‌ನಲ್ಲಿ) ಯಾವ ಬಸ್ ಇಲ್ಲದೇ ಪ್ರಯಾಣಿಕರಿಗೆ ತುಂಬಾ ಅನಾನುಕೂಲವಾಗಿದೆ.

4 ಗಂಟೆ ಮತ್ತು 4-30 ರ ನಡುವೆ ಈಗಾಗಲೇ ಮೂರು ಬಸ್‌ಗಳು ಓಡಾಡುತ್ತಿದ್ದು "ಕಲೆಕ್ಷನ್" ದೃಷ್ಟಿಯಿಂದಲೂ ಸಹ ಮೇಲೆ ಹೇಳಿದ ಸಮಯ ಬಹಳ ಉತ್ತಮವಾಗಿದೆ.

ಆದ್ದರಿಂದ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಿ ಪ್ರಯಾಣಿಕರಿಗೆ ಉತ್ತಮ ಸೇವಾ ಸೌಲಭ್ಯ ಒದಗಿಸುತ್ತಾರೆಂದು ಆಶಿಸೋಣವೇ?

—ನವಿಲೂರ್ ಪ್ರಕಾಶ್,
ನುಗ್ಗಿಮಕ್ಕಿ

ಗ್ರಾಮ ರಕ್ಷಕ ದಳಕ್ಕೆ ಸೇರಲು ಕರೆ

ಕೊಪ್ಪ: ಕಳ್ಳತನ, ದರೋಡೆ ಪ್ರಕರಣಗಳು ಎಲ್ಲಾಕಡೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರಾತ್ರಿ ಗಸ್ತು ತಿರುಗಲು ಪೋಲೀಸರಿಗೆ ನೆರವಾಗುವ ದೃಷ್ಟಿಯಿಂದ ನಾಗರಿಕ ಗ್ರಾಮ ರಕ್ಷಕ ದಳ ಅಥವಾ 'ರಾತ್ರಿಯ ಗಸ್ತು ದಳ'ಗಳನ್ನು ಗೋಪಿನಾಥ ಪ್ರಭು, ಇವರ ನೇತೃತ್ವದಲ್ಲಿ ಇಲ್ಲಿ ರಚಿಸಲಾಗಿದೆ.

ಸದ್ಯಕ್ಕೆ ಈ ದಳಗಳು ಮೇಲಿನಪೇಟೆ ಮತ್ತು ಕೆಳಪೇಟೆಗಳಲ್ಲಿ ಜುಲೈ 1ರಿಂದ ಕೆಲಸ ಆರಂಭಿಸಿದ್ದು ಇನ್ನೂ ಭಾರತ್ ಮಿಲ್ ರಸ್ತೆ, ಬಾಳಗಡಿ ಹಾಗೂ ಗುಣವಂತೆ ಬಡಾವಣೆಗಳಲ್ಲಿ ಇಂಥ ದಳಗಳನ್ನು ರಚಿಸಲು ಸ್ಥಳೀಯ ಆಸಕ್ತ ಯುವಕರು ಬೇಕಾಗಿದ್ದಾರೆ.

ಆಸಕ್ತಿಯುಳ್ಳವರು ಪೋಲೀಸ್ ಸಬ್ ಇನ್‌ಸ್ಪೆಕ್ಟರನ್ನಾಗಲಿ, ಗೋಪಿನಾಥ ಪ್ರಭು, ಪ್ರಭು ಹೋಟೆಲ್, ಕೊಪ್ಪ, ಇವರನ್ನಾಗಲಿ ಸಂಪರ್ಕಿಸಬಹುದು.

ಇಂಥ ಆಸಕ್ತ ನಾಗರಿಕರ ಹಿನ್ನೆಲೆ, ಚಾರಿತ್ರ್ಯ ಮತ್ತು ಸೇವಾ ಮನೋಭಾವಗಳನ್ನು ಪರಿಶೀಲಿಸಿ, ದಳಕ್ಕೆ ಸೇರಲು ಅನುಮತಿ ಕೊಡಲಾಗುವುದಲ್ಲದೆ, ಆನಂತರ ಅವರಿಗೆಲ್ಲ ಗುರುತಿನ ಚೀಟಿ ನೀಡಲಾಗುವುದು.

ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಊರ ಹಿತದ ಈ ಕಾರ್ಯದಲ್ಲಿ ಪಾಲ್ಗೊಳ್ಳಬೇಕಾಗಿ ಸಬ್ ಇನ್‌ಸ್ಪೆಕ್ಟರ್‌ರವರು ವಿನಂತಿಸಿದ್ದಾರೆ.

ಗದ್ದೆಮನೆಯಿಂದ ಗಡಿಗೇಶ್ವರಕ್ಕೆ 'ಲಕ್'

(2ನೇ ಪುಟದಿಂದ)

ಯೊಂದು ಮೇಲಿದ್ದು ಬೆಳಕು (ದೀಪ) ಕಂಡದ್ದು. ದೀಪ ಎಂದೊಡನೆ ಮತ್ತೆ 'ಜನಸಂಘ' ನೆನಪಾಯಿತೆ?

"ನನಗೆ ಒಂದು ಕಣ್ಣು ಹೋದರೂ ಚಿಂತೆಯಿಲ್ಲ, ನನ್ನ ವೈರಿಗೆ ಎರಡೂ ಕಣ್ಣು ಹೋಗಲಿ" ಎಂಬಂತೆ, ಜನತಾ–ಕಾಂಗ್ರೆಸಗಳೆರಡೂ 'ನಾವು ಗೆಲ್ಲದಿದ್ದರೂ ಚಿಂತೆಯಿಲ್ಲ, ಅವರೂ ಗೆಲ್ಲಬಾರದು' ಎಂದು ಪಣ ತೊಟ್ಟಂತೆ ಕಂಡು ಬಂದಾಗ ರಾಜಕೀಯದ ಜಯಲಕ್ಷ್ಮಿ 'ಅಲಿಪ್ತ' ನೀತಿಯನ್ನನುಸರಿಸಿ ಈ ಲಕ್ಷ್ಮೀನಾರಾಯಣ ರಾಯರಿಗೆ ಪ್ರಸನ್ನಳಾದದ್ದು ಆಶ್ಚರ್ಯವೇನಲ್ಲ.

....

ಈ ಮಂಡಲವು ಹಚ್ಚ ಹಸುರಿನ ಹರಿದ್ವರ್ಣ ಕಾಡುಗಳಿಂದ ಕೂಡಿದ್ದು ಸುಂದರ ಬನಸಿರಿಯನ್ನೇ ಪಡೆದಿದೆ. ಜನ ವಾಣಿಯಂತೆ ಬೇರೆ ಮಂಡಲದ ಕಾಡನ್ನು ರವಾನಿಸಿಕೊಳ್ಳುತ್ತಿರುವ ಈ ಮಂಡಲದ ರಾಜಕೀಯ ಪುಡಾರಿಗಳಿಗೆ ಈ ಮಂಡಲದ ಕಾಡು ರಸಕವಳವಿದ್ದಂತೆ. ಈ ಪ್ರಧಾನರು ಮನಸ್ಸು ಮಾಡಿ ಅಧಿಕಾರ ಸದುಪಯೋಗ ಪಡಿಸಿಕೊಂಡರೆ ಹಮ್ಮು–ಬಿಮ್ಮಿನ ಮರಗಳ್ಳ ಪುಡಾರಿಗಳ ಹೆಸರು ದೊಡ್ಡ ದೊಡ್ಡ ಅಕ್ಷರಗಳಲ್ಲಿ ಪತ್ರಿಕೆಗಳನ್ನು ಅಲಂಕರಿಸುವುದರಲ್ಲಿ ಸಂದೇಹವಿಲ್ಲ.

ಈ ಮಂಡಲದಲ್ಲಿ ತುರ್ತಾಗಿ ಆಗಬೇಕಾಗಿರುವುದು: ಗುಡ್ಡ ಪ್ರದೇಶವಾದ್ದರಿಂದ ರಸ್ತೆಗಳ ಸಂಪರ್ಕದ ಅಗತ್ಯ ಬಹಳಷ್ಟಿದೆ...ಹಳ್ಳ-ಹೊಳೆ ಹರಿದಿದ್ದರೂ "ಸಮುದ್ರದ ನೆಂಟಸ್ತನ–ಉಪ್ಪಿಗೆ ಬಡತನ" ಎನ್ನುವಂತೆ ಅಲ್ಲಲ್ಲಿ ಕುಡಿಯುವ ನೀರಿನ ಸಮಸ್ಯೆಯೂ ಇದೆ. ವಿದ್ಯುತ್ ಬೆಳಕನ್ನು ಕಾಣದ ಹಳ್ಳಿಗಳೂ ಇದ್ದು, ಹಳೆಯ 'ದೀಪ'ದ ಬೆಳಕಿನಿಂದ ಈ ಹೊಸ ಸಮಸ್ಯೆಗಳ ಕತ್ತಲೆಯನ್ನು ಹೊಡೆದೋಡಿಸಿ, ಮಾದರಿ ಪಕ್ಷೇತರ ಪ್ರಧಾನರಾಗಿರುವ ರಾವ್ ಮಾದರಿ ಹೆಸರನ್ನೇ ಪಡೆಯಲೆಂದು ಹಾರೈಸುತ್ತೇನೆ.

ಎಂ. ಐ. ಶ್ರೀನಿವಾಸ ಮೂರ್ತಿ.
ಮೂಡಬಾಗಿಲು

ಅಡಿಕೆ ಸಿಂಗಾರದಲ್ಲಿ ಗಿಡ !

ಶಾಂತಿಗ್ರಾಮ: ಇಲ್ಲಿನ ವ್ಯಾಪಾರಿ ಮೂಸಬ್ಬ ಎಂಬವರಿಗೆ ತಮ್ಮ ತೋಟದಲ್ಲಿ ಒಂದು ವಿಸ್ಮಯಕರವಾದ ಸಿಂಗಾರ ಕಂಡು ಬಂದಿತು. ಅದರ ನಾಲ್ಕು ಕವಲುಗಳಲ್ಲೂ ಅಡಿಕೆ ಗಿಡಗಳು ಬೆಳೆದಿವೆ. ಆದರೆ ಈ ಹೊಸ ಸಿಂಗಾರದಲ್ಲಿ ಬೇರೆ ಹರಳುಗಳಿಲ್ಲ.

ಪ್ರಕೃತಿಯಲ್ಲಿ ಆಗಾಗ ಕಂಡು ಬರುವ ವೈಚಿತ್ರ್ಯಗಳಂತೆಯೇ ಈ ವಿಚಿತ್ರದ ಗಿಡವನ್ನು ಸ್ಥಳೀಯ ಶಾಲಾ ಮುಖ್ಯೋಪಾಧ್ಯಾಯರಾದ ಎಚ್.ಡಿ.ಶಿವಪ್ಪ ಶಾಲೆಯಲ್ಲಿಟ್ಟುಕೊಂಡಿದ್ದಾರೆ. ಆಸಕ್ತರು ಪರಿಶೀಲಿಸಬಹುದು. (ವರದಿ: ಎಂ ವಿ. ಗಂಗಾಧರ್.)

ಉಚಿತ ತರಬೇತಿ

(4ನೇ ಪುಟದಿಂದ)

ಯೋಜಕರು, ನೆಹರು ಯುವ ಕೇಂದ್ರ, ಚಿಕ್ಕಮಗಳೂರು ಇವರಿಗೆ ಕಳುಹಿಸಿಕೊಡುವುದರ ಮೂಲಕ ತಮ್ಮ ಹೆಸರುಗಳನ್ನು ನೊಂದಾಯಿಸಬಹುದು. ತರಬೇತಿಯ ದಿನಾಂಕ ಮತ್ತು ಸ್ಥಳವನ್ನು ಸಂಬಂಧಿಸಿದ ಅಂಗವಿಕಲ ಅಭ್ಯರ್ಥಿಗಳಿಗೆ ಮುಂದೆ ತಿಳಿಸಲಾಗುವುದು. ಈ ಸಂಬಂಧವಾಗಿ ಹೆಚ್ಚಿನ ಮಾಹಿತಿಗಳು ಬೇಕಾಗಿದ್ದಲ್ಲಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದು.

ಮೀನಿನ ಅಡುಗೆ

(2ನೇ ಪುಟದಿಂದ)

ಇನ್ನು ಮೇಲೆ ಮಾತ್ರ ಹೀಗೆ ಮೂರ್ಖತನ ಮಾಡಬೇಡ". ಎಂದು ಹೇಳಿ ತಾನು ತಂದಿದ್ದೆಲ್ಲ ಅವಳಿಗೆ ಕೊಟ್ಟ.

ರೈತನ ದಡ್ಡ ಹೆಂಡತಿಗೆ ಮೋಸ ಮಾಡಿದ ವ್ಯಾಪಾರಿ ತನ್ನ ದಡ್ಡ ಹೆಂಡತಿಯಿಂದಾಗಿ ಒಂದಕ್ಕೆ ಹತ್ತು ಪಟ್ಟು ಮೋಸ ಹೋಗಿದ್ದ!

(ಕಥೆ ಹೇಳಿದ ಅಜ್ಜ : ಶ್ರೀ ಭವಾನಿಶಂಕರಶೆಟ್ಟಿ)

ಹ್ಯಾಂಡ್ ಬ್ಯಾಗ್ ಕಳೆದಿದೆ

ತಾ|| 30 6 87ರಂದು ಶಿವಮೊಗ್ಗದಿಂದ ಮೇಗೂರಿಗೆ ಹೋಗುವ ವಿನಾಯಕ ಬಸ್ಸಿನಲ್ಲಿಟ್ಟಿದ್ದ ಒಂದು ಹ್ಯಾಂಡ್ ಬ್ಯಾಗ್ ಕಳೆದು ಹೋಗಿದೆ. ಅದರಲ್ಲಿ ಎಸ್ಸೆಸ್ಸೆಲ್ಸಿ ಕ್ಯುಮ್ಯುಲೇಟಿವ್ ರಿಕಾರ್ಡ್, ಟಿ.ಸಿ.ಎಚ್. ಮೊದಲ ವರ್ಷದ ಮಾರ್ಕ್ಸ್ ಕಾರ್ಡ್ ಮತ್ತಿತರ ಕಾಗದ ಪತ್ರಗಳು ಇವೆ. ಸಿಕ್ಕಿದವರು ಕೂಡಲೇ ಕೊಪ್ಪ ಪೋಲೀಸ್ ಠಾಣೆಗೆ ತಲುಪಿಸಬೇಕಾಗಿ ಕೋರಿದೆ. ಸೂಕ್ತ ಬಹುಮಾನವುಂಟು.

—ಎಂ.ಆರ್. ಭಾಸ್ಕರ್,
ಮೇಗೂರು.

ಶಾಸಕರಿಗೆ ಕೃತಜ್ಞತೆ

ಶೃಂಗೇರಿ–ಕಿಕ್ರೆ–ಎತ್ತಿನಹಟ್ಟಿರಸ್ತೆಯ ಕೆಳಕೊಪ್ಪದಲ್ಲಿ ಎತ್ತಿನಹಟ್ಟಿ ಹಳ್ಳಕ್ಕೆ 'ಸೇತು ಬಂಧನ' ಕಾರ್ಯಕ್ರಮದನ್ವಯ ಸೇತುವೆ ಮಂಜೂರು ಮಾಡಿಸಲು ಶ್ರಮಿಸಿದ ಶಾಸಕರಾದ ಶ್ರೀ ಎಚ್.ಜಿ ಗೋವಿಂದಗೌಡರಿಗೆ ಗ್ರಾಮಸ್ಥರ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಸೇತುವೆ ಆಗುವುದರಿಂದ ಈ ಭಾಗದ ಹತ್ತಾರು ಹಳ್ಳಿಗಳ ಹರಿಜನರು, ಗಿರಿಜನರು, ಮತ್ತಿತರ ಎಲ್ಲಾ ಬಡವರಿಗೆ, ರೈತರಿಗೆ ಅತ್ಯಂತ ಉಪಯೋಗವಾಗುವುದರಿಂದ ಆದಷ್ಟು ಶೀಘ್ರವಾಗಿ ಈ ಕಾಮಗಾರಿ ಪೂರೈಸುವಂತೆ ಕ್ರಮ ಕೈಗೊಳ್ಳಬೇಕಾಗಿ ವಿನಂತಿಸುತ್ತೇನೆ.

—ಕೆ. ಸಿ. ಸತೀಶ್
ಮಂಡಲ ಪ್ರಧಾನರು, ಅಗಳಗಂಡಿ ಮಂಡಲ.
ಕೊಪ್ಪ ತಾ||

ಸಾಮಾಜಿಕ ಬಹಿಷ್ಕಾರಕ್ಕೆ ಪ್ರತಿಭಟನೆ

(1ನೇ ಪುಟದಿಂದ)

ಅನಂತರ ಸರಿವ ಮಳೆಯಲ್ಲೇ ತಾ॥ ಕಚೇರಿಗೆ ಮೆರವಣಿಗೆಯಲ್ಲಿ ತೆರಳಿದ ದಲಿತರು ತಹಸೀಲ್ದಾರ್ ಮೂಲಕ ಸರ್ಕಾರಕ್ಕೆ ಪ್ರತಿಭಟನಾ ಪತ್ರ ಸಲ್ಲಿಸಿದರು.

ಕೊಪ್ಪ ತಾಲ್ಲೂಕಿನ ಭೂಹಿತರು, ಕೃಷಿ ಕಾರ್ಮಿಕರು ಮತ್ತಿತರ ದಲಿತರಿಗೆ ದರ್ಖಾಸ್ತು ಭೂಮಿ, ಜನತಾ ನಿವೇಶನ-ಮನೆಗಳನ್ನು ಮಂಜೂರು ಮಾಡುವುದು. ರಾಜಕಾರಣಿಗಳು ಪೋಲೀಸರನ್ನು ಬಳಸಿ ದೌರ್ಜನ್ಯ-ದಬ್ಬಾಳಿಕೆ ನಡೆಸುತ್ತಿರುವುದರ ವಿರುದ್ಧ ರಕ್ಷಣೆ, ಕುಡಿವ ನೀರು, ಭಾಗ್ಯ ಜ್ಯೋತಿ, ಶಾಲೆ, ಆಸ್ಪತ್ರೆಗಳ ಸೌಕರ್ಯ ಮುಂತಾದ ಸ್ಥಳೀಯ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಸಹ ತಹಸೀಲ್ದಾರ್, ಜಿಲ್ಲಾಧಿಕಾರಿ ಮತ್ತು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದರು.

ನಂತರ ತಾ॥ ಕಚೇರಿಯಲ್ಲಿ ಸಾಂಕೇತಿಕವಾಗಿ ಧರಣಿ ನಡೆಸಿದರು.

ಎಸ್ಸೆಸ್ಸೆಲ್ಸಿ ನಂತರ ಮುಂದೇನು?

ಹರಿಹರಪುರ: ಇಲ್ಲಿನ ರಾಷ್ಟ್ರೋತ್ಥಾನ ಬಳಗದ ಆಶ್ರಯದಲ್ಲಿ ಎಸ್ಸೆಸ್ಸೆಲ್ಸಿ ನಂತರ ಮುಂದೇನು? ಎಂಬ ಬಗ್ಗೆ ವೃತ್ತಿ ಮಾರ್ಗದರ್ಶನದ ಕಾರ್ಯಕ್ರಮ ನಡೆಯಿತು. ಬಳಗದ ಸಂಚಾಲಕ ಹಾಗೂ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಕೆ. ಜಿ. ಎನ್ ಶಾಸ್ತ್ರಿ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಸಮಾರು 120 ಅಭ್ಯರ್ಥಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನ. ರಾ. ಪುರ ಸರ್ಕಾರಿ ಕ್ವಾರ್ಟರ್ಸ್‌ನಲ್ಲಿ ಕಳ್ಳತನ

ನ. ರಾ. ಪುರ: ಇಲ್ಲಿನ ಸರ್ಕಾರಿ ವಸತಿ ಗೃಹಗಳಲ್ಲಿ ಲೋಕೋಪಯೋಗಿ ಇಲಾಖೆಯ ಜೂನಿಯರ್ ಇಂಜಿನಿಯರ್ ಚಂದ್ರಶೇಖರ್ ಅವರ ಮನೆಯಲ್ಲಿ ಜೂನ್ 26ರ ರಾತ್ರಿ ಕಳ್ಳತನ ನಡೆದಿದೆ.

ಸುಮಾರು 7-30 ಗಂಟೆಯ ವೇಳೆಗೆ ವಿದ್ಯುದ್ದೀಪ ಹೋಗಿದ್ದು, ಆ ಹೊತ್ತಿಗೆ ಚಂದ್ರಶೇಖರ್ ಊಟಕ್ಕೆ ಹೋಗಿದ್ದರೆನ್ನಲಾಗಿದೆ. 1 ಟ್ರಾನ್ಸಿಸ್ಟರ್, ಕ್ಯಾಲ್ಕ್ಯುಲೇಟರ್, 1 ರೂ. ನ ಒಂದಷ್ಟು ಚಿಲ್ಲರೆ ನಾಣ್ಯಗಳು ಕಳುವಾಗಿವೆಯೆಂದು ತಿಳಿದುಬಂದಿದೆ.

"ಆದಿತ್ಯ ಫೈನಾನ್ಸ್ ವಿರುದ್ಧ ದೂರುಗಳಿದ್ದರೆ ನೀಡಿ"

—ಸಿ. ಒ. ಡಿ.ಯ ಐ. ಜಿ. ಪಿ.

ಬೆಂಗಳೂರು: ಆದಿತ್ಯ ಫೈನಾನ್ಸ್ ಸಂಸ್ಥೆಯ ವಿರುದ್ಧದ ಸಾರ್ವಜನಿಕರ ದೂರುಗಳ ಬಗ್ಗೆ ಬೆಂಗಳೂರಿನ ಸಿ.ಒ.ಡಿ. ಪೋಲೀಸರು ತನಿಖೆ ಕೈಗೊಂಡಿದ್ದು, ಈ ಕಂಪೆನಿಯಿಂದ ತೊಂದರೆ ಅಥವಾ ನಷ್ಟಕ್ಕೊಳಗಾಗಿರುವವರು ಸ್ಥಳೀಯ ಪೋಲೀಸರಿಗೆ ದೂರು ನೀಡಬೇಕೆಂದು ಸಿಒಡಿಯ ವಿಶೇಷ ಇನ್‌ಸ್ಪೆಕ್ಟರ್ ಜನರಲ್‌ರವರು ತಿಳಿಸಿದ್ದಾರೆ.

ಬನ್ನೂರು-ಬಾಳೆಹೊನ್ನೂರು ಕೃಷಿ ಕಾರ್ಮಿಕರ ಸಂಘ

ಬಾಳೆಹೊನ್ನೂರು: ಇಲ್ಲಿಗೆ ಸಮೀಪದ ಬನ್ನೂರಿನಲ್ಲಿ "ಬನ್ನೂರು-ಬಾಳೆಹೊನ್ನೂರು ಕೃಷಿ ಕಾರ್ಮಿಕರ ಸಂಘ" ಜೂನ್ 28 ರಂದು ಆರಂಭವಾಯಿತು. ನ. ರಾ ಪುರ ತಾ॥ ಸಿ ಪಿ ಐ ಕಾರ್ಯದರ್ಶಿ ರಮೇಶ ಪೂಜಾರಿ ಹಾಜರಿದ್ದರು. ಸಂಘಕ್ಕೆ 14 ಜನ ಪದಾಧಿಕಾರಿಗಳನ್ನು ಆರಿಸಲಾಯಿತು. ಬಿ. ಜಿ. ನಾರಾಯಣ ಪ್ರಧಾನ ಕಾರ್ಯದರ್ಶಿ, ಕೇಶವನ್ ಸಂಘಟನಾ ಕಾರ್ಯದರ್ಶಿ ಹಾಗೂ ಚಂದ್ರ ಆಚಾರಿ ಖಜಾಂಚಿಯಾಗಿದ್ದಾರೆ.

ತಾ. 12-7-87 ರಂದು ಬನ್ನೂರಿನಲ್ಲಿ ಕೃಷಿ ಕಾರ್ಮಿಕರ ಬಹಿರಂಗ ಸಭೆ ಕರೆಯಲಾಗಿದೆ.

ಶಿವಮೊಗ್ಗ ಅಡಿಕೆ ಧಾರಣೆ

ತಾ॥ 1.7.1987

ಸರಕು : 4723 - 5269
ಬೆಟ್ಟೆ : 2689 - 3100
ಗೊರಬಲು: 932 - 1155

ಸಾಗರ ಅಡಿಕೆ ತಾ॥ 1.7.1987

ಇಡಿ ಅಡಿಕೆ ರೂ. 1805-2120
ಆಪಿ ರೂ. 4289-4670
ಚಾಲಿ ರೂ. 1236-1421
ಸಿಪ್ಪೆ ಗೋಟು ರೂ. 481-681
ಮೆಣಸು ರೂ. 5364-5576

ಮಂಗಳೂರು ಧಾರಣೆ

ದಿನಾಂಕ 1-7-87

ಏಲಕ್ಕಿ ರೂ. 130-170
ಕಾಳುಮೆಣಸು 5568-5578

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.